ಕರ್ನಾಟಕ ಸರ್ಕಾರ
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

# 2008–2009ನೇ ಸಾಲಿನ ವಾರ್ಷಿಕ ವರದಿ
# (ಮಾರ್ಚ್ ಅಂತ್ಯದವರೆಗೆ)

## ಮುನ್ನುಡಿ

ಕೈಗಾರಿಕೆಗಳ ಸ್ಥಾಪನೆಗೆ ಕರ್ನಾಟಕವು ಒಂದು ಉತ್ತಮ ಮತ್ತು ಸೂಕ್ತ ಸ್ಥಳ ಎಂದು ಹೆಸರುವಾಸಿಯಾಗಿದೆ. ರಾಜ್ಯವು ಹಲವಾರು ವರ್ಷಗಳಿಂದ ಬದಲಾವಣೆಯ ಅವಶ್ಯಕತೆಗಳಿಗೆ ತಕ್ಕಂತೆ ಪ್ರಗತಿಪರ ದೃಷ್ಟಿಕೋನವನ್ನು ಗಮನದಲ್ಲಿಟ್ಟುಕೊಂಡು ದೇಶದ ಆರ್ಥಿಕ ಹಾಗೂ ಕೈಗಾರಿಕಾ ಬೆಳವಣಿಗೆಗೆ ಒತ್ತು ನೀಡುತ್ತಿದೆ. ರಾಜ್ಯವು ದೊಡ್ಡ ಸಾರ್ವಜನಿಕ ಉದ್ದಿಮೆಗಳನ್ನು, ದೊಡ್ಡ ಖಾಸಗಿ ಸ್ವಾಮ್ಯದ ಕೈಗಾರಿಕೆಗಳನ್ನು ಹಾಗೂ ಬಹಳಷ್ಟು ಎಂಎಸ್ಎಂಇಗಳನ್ನು ಹೊಂದಿದೆ. ಇತ್ತೀಚಿನ ದಿನಗಳಲ್ಲಿ ಕರ್ನಾಟಕವು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಇತರ ಮೌಲ್ಯಾಧಾರಿತ ಜ್ಞಾನವುಳ್ಳ ಕೈಗಾರಿಕಾ ವಲಯಗಳನ್ನು ಸ್ಥಾಪಿಸುತ್ತಿದ್ದು ಇದರಿಂದಾಗಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮುಂತಾದ ವಲಯಗಳಲ್ಲಿ ಸಂಶೋದನೆ ಅಭಿವೃದ್ಧಿ ಸೌಲಭ್ಯವನ್ನು ಹೊಂದುವಲ್ಲಿ ಸಮರ್ಥವಾಗಿದೆ. ಕರ್ನಾಟಕ ರಾಜ್ಯವು ಹಲವಾರು ವಂಶ ಪಾರಂಪರ್ಯ ಗುಡಿ ಕೈಗಾರಿಕೆಗಳನ್ನು ಕುಶಲ ಕೈಗಾರಿಕೆಗಳನ್ನು, ಹಾಗೂ ಅತಿ ಸಣ್ಣ ಉದ್ಯಮಗಳಾದಂತಹ ಕೈಮಗ್ಗ, ವಿದ್ಯುತ್‌ಮಗ್ಗ, ರೇಷ್ಮೆ ನೇಕಾರಿಕೆ, ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳನ್ನು ಹೊಂದಿದೆ.

ಇದರೊಂದಿಗೆ ರಾಜ್ಯವು ಜಾಗತಿಕ ಆರ್ಥಿಕ ಹಿನ್ನಡೆಯ ಕೆಟ್ಟ ಪರಿಣಾಮಗಳನ್ನು ಎದುರಿಸಲು ಹಲವಾರು ಉತ್ತೇಜನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಪ್ರಸ್ತುತ ಪರಿಸ್ಥಿತಿಯನ್ನು ಎದುರಿಸುವಲ್ಲಿ ರಾಜ್ಯವು ಕೆಲವು ತಾತ್ಕಾಲಿಕ ಸುಧಾರಣೆಗಳನ್ನು ರಿಯಾಯಿತಿಗಳನ್ನು ಕೈಗಾರಿಕಾ ಹಾಗೂ ಸೇವಾ ಕ್ಷೇತ್ರಗಳಲ್ಲಿ ಹಮ್ಮಿಕೊಂಡಿದೆ.

ಕರ್ನಾಟಕ ಸರ್ಕಾರವು **ಜಿಎಸ್‌ಡಿಪಿ** ಬೆಳವಣಿಗೆಯನ್ನು ಹೆಚ್ಚಿಸಲು , ಉತ್ಪಾದನ ವಲಯದ ಬಲವರ್ಧನೆಯಿಂದ ಹೆಚ್ಚು ಹೆಚ್ಚು ಉದ್ಯೋಗಾವಕಾಶಗಳ ಸೃಜನೆ ಮಾಡಿ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವುದಲ್ಲದೆ , ರಾಷ್ಟ್ರಿಯ ರಫ್ತನ್ನು ಹೆಚ್ಚಿಸುವ ಉದ್ದೇಶ ಹೊಂದಿದೆ. ಈ ದಿಶೆಯಲ್ಲಿ ಹಲವಾರು ಸೃಜನಾತ್ಮಕ ಅಂದರೆ ಕೈಗಾರಿಕಾ ಪೆಸಿಲಿಟೇಶನ್ ಖಾಯ್ದೆ ,ಹೊಸ ಕೈಗಾರಿಕಾ ನೀತಿ 2009–14, ರಾಜ್ಯ ವಿಶೇಷ ಆರ್ಥಿಕ ವಲಯ ನೀತಿ 2009, ಸುವರ್ಣ ಕರ್ನಾಟಕ ಜವಳಿ ನೀತಿ, ಹಾಗು ಕರ್ನಾಟಕ ರಾಜ್ಯ ಖನಿಜ ನೀತಿ ಮುಂತಾದವುಗಳನ್ನು ಅನುಷ್ಠಾನಕ್ಕೆ ತಂದಿದೆ.

**ಕರ್ನಾಟಕ ಕೈಗಾರಿಕಾ ನೀತಿ 2009–14ರ ಪ್ರಮುಖ ಧ್ಯೇಯಗಳು ಈ ರೀತಿ ಇವೆ.**

1. ಕೈಗಾರಿಕಾ ಬಲಿಷ್ಠ ಬೆಳವಣಿಗೆಗೆ ಬೇಕಾದ ಅನುಕೂಲಕರ ಸನ್ನಿವೇಶ ಕಲ್ಪಿಸುವುದು.
2. ರಾಜ್ಯದಲ್ಲಿ ಕೈಗಾರಿಕೆಗಳ ಸಮಗ್ರ ಅಭಿವೃದ್ಧಿ
3. 2014 ರೊಳಗಾಗಿ 10.00 ಲಕ್ಷ ಉದ್ಯೋಗಗಳ ಹೆಚ್ಚುವರಿ ಸೃಷ್ಠಿ
4. ರಾಜ್ಯದ ಒಟ್ಟು ಜಿಡಿಪಿಯನ್ನು ಶೇಕಡ 17 ರಿಂದ ಶೇ. 20ಕ್ಕೆ ಕೈಗಾರಿಕಾ ನೀತಿಯ ಅವಧಿಯಲ್ಲಿ ಹೆಚ್ಚಿಸುವುದು.

ಈ ಮೇಲಿನ ಧ್ಯೇಯಗಳನ್ನು ಕಾರ್ಯಗತಗೊಳಿಸಲು ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ ಉದ್ದೇಶವನ್ನು ಹೊಂದಿದೆ.

1. ಡಾ. ಡಿ.ಎಮ್. ನಂಜುಂಡಪ್ಪರವರ ಸಮಿತಿಯ ವರದಿಯಂತೆ ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸಲು ತಾಲ್ಲೂಕುಗಳನ್ನು , ಹಿಂದುಳಿಕೆ ಸ್ಥಿತಿ ಆಧಾರದ ಮೇಲೆ 4 ವಲಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ.
2. ಅಂತರಾಷ್ಟ್ರೀಯ ಮಟ್ಟದ ಮೂಲಭೂತ ಸೌಕರ್ಯಗಳನ್ನು ನೀಡಲು ಸರ್ಕಾರಿ ಮತ್ತು ಖಾಸಗಿ ಪಾಲುದಾರಿಕೆಯನ್ನು ಉತ್ತೇಜಿಸುವುದು.
3. ರಾಜ್ಯದಾದ್ಯಂತ ಸುವರ್ಣ ಕರ್ನಾಟಕ ಅಭಿವೃದ್ಧಿ ಕಾರಿಡಾರ್ (ಎಸ್.ಕೆ.ಡಿ.ಪಿ) ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವುದು.

4. ಲಭ್ಯವಿರುವ ಸ್ಥಳೀಯ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಂಡು ಕೈಗಾರಿಕಾ ವಲಯಗಳನ್ನು ಅಭಿವೃದ್ಧಿಪಡಿಸಿ ಆ ಸ್ಥಳದ ಜನರು ಪಟ್ಟಣಕ್ಕೆ ವಲಸೆ ಹೋಗುವುದನ್ನು ಕಡಿಮೆ ಮಾಡುವುದು.
5. ಸಮಗ್ರ ಬೆಳವಣಿಗೆಗೆ ಭೂಸ್ವಾಧೀನ ಪ್ರಕ್ರಿಯೆಯನ್ನು ಸರಳೀಕರಿಸುವುದು

6. ರೈತರ ಮತ್ತು ಬಂಡವಾಳ ಹೂಡಿಕೆದಾರರ ಸಮಾಜಿಕ ಹಾಗೂ ಆರ್ಥಿಕ ಹಿತಾಶಕ್ತಿಯನ್ನು ಭೂಸ್ವಾಧೀನಗೊಳಿಸಿಕೊಳ್ಳುವಾಗ ಕಾಯ್ದುಕೊಳ್ಳುವುದು.

7. ಅತೀ ಸಣ್ಣ , ಸಣ್ಣ ಹಾಗೂ ಮಧ್ಯಮ ವಲಯದ ಕೈಗಾರಿಕೆಗಳಿಗೆ ಹೆಚ್ಚಿನ ಸೌಲಭ್ಯವನ್ನು ಒದಗಿಸಿ ಅಂತರ್‌ರಾಷ್ಟ್ರೀಯಮಟ್ಟದ ಪೈಪೋಟಿಯನ್ನು ಎದುರಿಸುವಂತಹ ಸಾಮರ್ಥ್ಯ ನೀಡುವುದು. ಕೈಗಾರಿಕಾ ನಿರ್ವಹಣೆಗೆ ಸಂಬಂಧಪಟ್ಟಂತೆ ಉತ್ತಮ ರಿಯಾಯಿತಿ ಮತ್ತು ಸೌಲಭ್ಯಗಳನ್ನು ನೀಡಿ ಅತೀ ಹಿಂದುಳಿದ ಪ್ರದೇಶದಲ್ಲಿ ಬಂಡವಾಳ ಹೂಡಿಕೆಯಾಗುವಂತೆ ಮಾಡಿ ಉದ್ಯೋಗ ಸೃಜನೆಯೊಂದಿಗೆ ಎಂಎಸ್‌ಎಂಇ ವಲಯಕ್ಕೆ ಪ್ರಾಮುಖ್ಯತೆ ನೀಡುವುದು.

**1. ಬಂಡವಾಳ ಹೂಡಿಕೆಗೆ ಅನುಮೋದನೆ:**

**ಎ) ಮೆಗಾ ಯೋಜನೆ:**

ರಾಜ್ಯ ಉನ್ನತಮಟ್ಟದ ತೀರುವಳಿ ಸಮಿತಿಯು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರೂ. 50.00 ಕೋಟಿಗೂ ಹೆಚ್ಚಿಗೆ ಬಂಡವಾಳ ಹೂಡುವ ಯೋಜನೆಗಳಿಗೆ ಅನುಮೋದನೆ ನೀಡುತ್ತದೆ. ಪ್ರಸಕ್ತ ಸಾಲಿನ ಮಾರ್ಚ್ ಅಂತ್ಯದವರೆಗೆ ರಾಜ್ಯದ ಉನ್ನತ ಮಟ್ಟದ ಸಮಿತಿಯು 44 ಮೆಗಾ ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು ರೂ.105266.20 ಕೋಟಿಗಳಷ್ಟು ಬಂಡವಾಳ ಹೂಡಿಕೆಯಾಗಿದೆ. ಈ ಯೋಜನೆಗಳಿಂದ 4.10 ಲಕ್ಷ ಜನರಿಗೆ ಉದ್ಯೋಗಾವಕಾಶ ದೊರೆಯಲಿದೆ. ವಲಯವಾರು ಹಾಗೂ ಜಿಲ್ಲಾವಾರು ಅನುಮೋದಿತ ಯೋಜನೆಗಳ ವಿವರಗಳನ್ನು **ಅನುಬಂಧ–1 ಮತ್ತು 2** ರಲ್ಲಿ ಲಗತ್ತಿಸಿದೆ.

**ಬಿ) ಸಣ್ಣ, ಮಧ್ಯಮ ಹಾಗೂ ಬೃಹತ್ ಯೋಜನೆಗಳು :**

ಕರ್ನಾಟಕ ಉದ್ಯೋಗ ಮಿತ್ರವು ರಾಜ್ಯಮಟ್ಟದ ಏಕ ಗವಾಕ್ಷಿ ಸಮಿತಿಯ ಸಚಿವಾಲಯದಂತೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರೂ.3.00 ಕೋಟಿಯಿಂದ ರೂ. 50.00 ಕೋಟಿವರೆಗಿನ ಬಂಡವಾಳ ಹೂಡಿಕೆಯ ಯೋಜನೆಗಳಿಗೆ ಅನುಮೋದನೆ ನೀಡುತ್ತದೆ. ಪ್ರಸಕ್ತ ಸಾಲಿನಲ್ಲಿ ರಾಜ್ಯ ಮಟ್ಟದ ಏಕ ಗವಾಕ್ಷಿ ತೀರುವಳಿ ಸಮಿತಿಯು 310 ಯೋಜನೆಗಳಿಗೆ ರೂ. 5181.62 ಕೋಟಿ ಬಂಡವಾಳ ಹೂಡಿಕೆಯೊಂದಿಗೆ ಅನುಮೋದಿಸಿದೆ. ಈ ಯೋಜನೆಗಳಿಂದ 1.35 ಲಕ್ಷ ಜನರಿಗೆ ಉದ್ಯೋಗಾವಕಾಶ ದೊರಕುವ ನೀರಿಕ್ಷೆ ಇದೆ. ವಲಯವಾರು ಹಾಗೂ ಜಿಲ್ಲಾವಾರು ಅನುಮೋದಿಸಲ್ಪಟ್ಟ ಯೋಜನೆಗಳ ವಿವರವನ್ನು **ಅನುಬಂಧ–3–4**ರಲ್ಲಿ ಲಗತ್ತಿಸಲಾಗಿದೆ.

ಸಿ) ರಾಜ್ಯದಲ್ಲಿ ಕಳೆದ 5 ವರ್ಷಗಳ ಬಂಡವಾಳ ಹೂಡಿಕೆಯ ನಕ್ಷೆಯು ಈ ಕೆಳಗಿನಂತಿದೆ.




ಡಿ) ಏಕ ಗವಾಕ್ಷಿ ಸಮಿತಿ ಹಾಗೂ ರಾಜ್ಯ ಉನ್ನತಮಟ್ಟದ ತೀರುವಳಿ ಸಮಿತಿಯಲ್ಲಿ ಅನುಮೋದಿಸಲ್ಪಟ್ಟ ಘಟಕಗಳ ನಕ್ಷೆಯು ಈ ಕೆಳಗಿನಂತಿದೆ.




## ಇ) ಎಂಎಸ್‌ಎಂಇ ವಲಯ : ಐ.ಇ. ಎಮ್. ಪಾರ್ಟ್–2

2008–09ನೇ ಸಾಲಿನಲ್ಲಿ 15705 ಘಟಕಗಳು ರೂ.10167.33 ಲಕ್ಷಗಳ ಬಂಡವಾಳದೊಂದಿಗೆ ಐಇಎಂ ಭಾಗ–2ನ್ನು ನೀಡಲಾಗಿದೆ ಈ ಘಟಕಗಳಲ್ಲಿ 105034 ಜನರಿಗೆ ಉದ್ಯೋಗಾವಕಾಶ ದೊರಕಿದೆ. ಜಿಲ್ಲಾವಾರು ಎಂಎಸ್‌ಎಂಇ–ಐಇಎಂ ಭಾಗ–2 ನೀಡಲಾದ ಘಟಕಗಳ ವಿವರಗಳು **ಅನುಬಂಧ–V** ರಲ್ಲಿ ಲಗತ್ತಿಸಿದೆ.

ಕಳೆದ 5 ವರ್ಷಗಳಲ್ಲಿ ಶಾಶ್ವತ ನೊಂದಣಿ ಪತ್ರ / ಐಇಎಂ ಭಾಗ–2 ನೀಡಲಾದ ಘಟಕಗಳ ನಕ್ಷೆಯು ಈ ಕೆಳಗಿನಂತಿದೆ.



**ಎಫ್) ಬೃಹತ್ ಮತ್ತು ಮೆಗಾ ಘಟಕಗಳು:**

ರಾಜ್ಯದಲ್ಲಿ ಒಟ್ಟು 779 ಬೃಹತ್ ಮತ್ತು ಮೆಗಾ ಕೈಗಾರಿಕಾ ಘಟಕಗಳು ರೂ. 64762.54 ಕೋಟಿ ಗಳೊಂದಿಗೆ ಸ್ಥಾಪಿಸಲ್ಪಟ್ಟಿದ್ದು 361051 ಲಕ್ಷ ಜನರಿಗೆ ಉದ್ಯೋಗಾವಕಾಶ ಸೃಷ್ಟಿಸಿದೆ. ಜಿಲ್ಲಾವಾರು ಘಟಕಗಳ ವಿವರವನ್ನು **ಅನುಬಂಧ–5ಎ** ರಲ್ಲಿ ಲಗತ್ತಿಸಲಾಗಿದೆ.

**ಜಿ) ಐಇಎಂ ಭಾಗ–1 ಕೈಗಾರಿಕಾ ಉದ್ಯಮಿಗಳ ಮೆಮೋರಂಡಮ್ –ಐಇಎಂ ಭಾಗ–1 :**

ಪ್ರಸಕ್ತ ಸಾಲಿನಲ್ಲಿ 1631 ಐಇಎಂ ಭಾಗ–1 ನೀಡಲಾಗಿದೆ. ಜಿಲ್ಲಾವಾರು ಹಂಚಿಕೆಯು **ಅನುಬಂಧ–6** ರಲ್ಲಿ ತೋರಿಸಲಾಗಿದೆ.

**2. ಕೈಗಾರಿಕಾ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಕರ್ತೃತ್ವ:**

**ಎ). ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ:**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ನೀತಿ 1966 ರ ಪ್ರಕಾರ ಶಾಸನಬದ್ಧವಾಗಿ ಸ್ಥಾಪಿತಗೊಂಡಿದೆ. ಈ ಸಂಸ್ಥೆಯ ಉದ್ದೇಶವು ಭೂಮಿಯನ್ನು ಸ್ವಾದೀನಪಡಿಸಿಕೊಂಡು ಸಂಬಂಧಪಟ್ಟ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ ಕೈಗಾರಿಕಾ ಪ್ರದೇಶವಾಗಿ ಅಭಿವೃದ್ಧಿಪಡಿಸುವುದಾಗಿರುತ್ತದೆ. ಈ ಮಂಡಳಿಯು ಪ್ರಾರಂಭದಿಂದ ಮಾರ್ಚ್ ಅಂತ್ಯದವರೆಗೆ 78652 ಎಕರೆಯಷ್ಟು ಭೂಮಿಯನ್ನು ಹಲವಾರು ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡಿದೆ.

ದಿನಾಂಕ 1–4–2008 ರಿಂದ 31–3–2009ರ ವರೆಗೆ ಮಂಡಳಿಯು 7105.25 ಎಕರೆಯಷ್ಟು ಭೂಮಿಯನ್ನು ಕೈಗಾರಿಕಾ ಪ್ರದೇಶಕ್ಕೆ ಹಾಗೂ ಏಕ ಘಟಕ ಸಂಕೀರ್ಣಕ್ಕಾಗಿ ಸ್ವಾಧೀನಪಡಿಸಿಕೊಂಡಿದೆ.

1) ಕೈಗಾರಿಕಾ ಪ್ರದೇಶ 3841.06 ಎಕರೆ
2) ಏಕ ಗವಾಕ್ಷಿ ಘಟಕ ಸಂಕೀರ್ಣ 3264.19 ಎಕರೆ

ಮಂಡಳಿಯು ಭೂ ಪರಿಹಾರಕ್ಕಾಗಿ ಇದುವರೆಗು ರೂ. 1292.34 ಕೋಟಿಗಳಷ್ಟು ಖರ್ಚು ಮಾಡಿದೆ. ಅದಲ್ಲದೆ 242 ಕೋಟಿಗಳಷ್ಟು ಹಣವನ್ನು ಕೈಗಾರಿಕಾ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು 2008–09 ನೇ ಸಾಲಿನಲ್ಲಿ ವ್ಯಯ ಮಾಡಿದೆ.

ಪ್ರಸಕ್ತ ಸಾಲಿನಲ್ಲಿ ಬೇರೆ ಬೇರೆ ಕೈಗಾರಿಕಾ ಪ್ರದೇಶಗಳಲ್ಲಿ 693 ಘಟಕಗಳಿಗೆ 1713 ಎಕರೆಯಷ್ಟು ಭೂಮಿಯನ್ನು ಹಂಚಿಕೆ ಮಾಡಲಾಗಿದೆ.

ಕೆಐಎಡಿಬಿಯು ಸುವರ್ಣ ಕರ್ನಾಟಕ ಅಭಿವೃದ್ಧಿ ಕಾರಿಡಾರ್ ಯೋಜನೆಯನ್ನು ಕಾರ್ಯಗತ ಗೊಳಿಸುವ ಕಾರ್ಯಕ್ರಮವನ್ನು ಕೂಡ ಹಮ್ಮಿಕೊಂಡಿದೆ. ಈ ಯೋಜನೆಗಾಗಿ ಭೂಮಿಯನ್ನು ಗುರುತಿಸುವುದು ಹಾಗೂ ಯೋಜನಾ ನಿರ್ವಹಣಾ ಕನ್ಸಲ್‌ಟೆಂಟ್ ಆಯ್ಕೆ ಮಾಡುವ ಪ್ರಕ್ರಿಯೆ ಪ್ರಾರಂಭವಾಗಿದೆ.

**ಬಿ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ:**

ನಿಗಮವು ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಒಂದು ಪ್ರಮುಖ ಸಂಸ್ಥೆಯಾಗಿದೆ. ಕೈಗಾರಿಕಾ ವಸಾಹತುವನ್ನು ಸ್ಥಾಪಿಸಿ ಅಭಿವೃದ್ಧಿಪಡಿಸಿ, ಕೈಗಾರಿಕಾ ಷೆಡ್ಡುಗಳನ್ನು ನಿರ್ಮಾಣ ಮಾಡಿ ಕೈಗಾರಿಕೋದ್ಯೋಮಿಗಳಿಗೆ ಹಂಚಿಕೆ ಮಾಡುವುದು, ನಿಗಮದ ಪ್ರಮುಖ ಕೆಲಸವಾಗಿದೆ. ಇಲ್ಲಿಯವರೆಗೆ ರಾಜ್ಯದಲ್ಲಿ 160 ಕೈಗಾರಿಕಾ ವಸಾಹತುಗಳನ್ನು ನಿಗಮವು ಸ್ಥಾಪಿಸಿದೆ, ಈ ಕೈಗಾರಿಕಾ ವಸಾತುಗಳಲ್ಲಿ 5758 ಷೆಡ್ಡುಗಳು ನಿರ್ಮಾಣಗೊಂಡಿವೆ. ಮತ್ತು 5498 ಷೆಡ್ಡುಗಳು ಹಂಚಿಕೆಯಾಗಿರುತ್ತವೆ.

**ಸಿ) ಕರ್ನಾಟಕ ವಿಶೇಷ ಆರ್ಥಿಕ ವಲಯ:**

ಕರ್ನಾಟಕ ರಾಜ್ಯದಲ್ಲಿ ವಿಶೇಷ ಆರ್ಥಿಕ ವಲಯಗಳನ್ನು ಬೆಂಬಲಿಸಲು ಹಾಗೂ ಪ್ರೋತ್ಸಾಹಿಸಲು ರಾಜ್ಯ ವಿಶೇಷ ಆರ್ಥಿಕ ವಲಯ ನೀತಿ 2009ನ್ನು ಘೋಷಿಸಲಾಗಿದೆ. ಈ ನೀತಿಯು ಅನೇಕ ರಿಯಾಯಿತಿಗಳನ್ನು ಹಾಗೂ ಬೆಂಬಲಗಳನ್ನು ಕೈಗಾರಿಕೆಗಳಿಗೆ ನೀಡುವುದರೊಂದಿಗೆ ಮಾರ್ಗಸೂಚಿಯ ಪಾಲನೆಯನ್ನು ಸರಳೀಕರಣಗೊಳಿಸಿದೆ.

**ವಿಶೇಷ ಆರ್ಥಿಕ ವಲಯ ಅನುಮೋದನೆಗಳು:**

ವಿಶೇಷ ಆರ್ಥಿಕ ವಲಯ ಖಾಯಿದೆ 2005ರ ಅಡಿಯಲ್ಲಿ ರಚಿಸಲಾದ ಅನುಮೋದನಾ ಸಮಿತಿಯಿಂದ ವಿಶೇಷ ಆರ್ಥಿಕ ವಲಯ ಅಭಿವೃದ್ಧಿಗಾರರಿಗೆ ವಿಶೇಷ ಆರ್ಥಿಕ ವಲಯವನ್ನು ಅಭಿವೃದ್ಧಿಪಡಿಸಲು ಅನುಮೋದನೆ ನೀಡಲಾಗುತ್ತದೆ. ತಾತ್ವಿಕ ಅನುಮೋದನೆಯನ್ನು ಭೂಮಿಯನ್ನು ಹೊಂದಿರದ ವಿಶೇಷ ಆರ್ಥಿಕ ವಲಯ ಅಭಿವೃದ್ಧಿಗಾರರಿಗೆ ದೊರಕಿದರೆ ಪ್ರಾಥಮಿಕ ಅನುಮೋದನೆಯನ್ನು ಭೂಮಿಯನ್ನು ಹೊಂದಿರುವ ವಿಶೇಷ ಆರ್ಥಿಕ ಅಭಿವೃದ್ಧಿದಾರರಿಗೆ ದೊರಕುತ್ತದೆ.

ಅನುಮೋದನಾ ಸಮಿತಿಯು ಮಾಹಿತಿ ತಂತ್ರಜ್ಞಾನ/ಐಟಿಇಎಸ್, ಹಾರ್ಡ್‌ವೇರ್ ಜೈವಿಕ ತಂತ್ರಜ್ಞಾನ ವಲಯಗಳ ವಿಶೇಷ ಉತ್ಪಾದನೆ ಹಾಗೂ ವಿಮಾನಕ್ಕೆ ಅಗತ್ಯವಿರುವ ಸಲಕರಣೆಗಳಿಗೆ 50 ಪ್ರಾಥಮಿಕ ಅನುಮೋದನೆ ಹಾಗೂ 8 ತಾತ್ವಿಕ ಅನುಮೋದನೆಯನ್ನು ಕರ್ನಾಟಕದಲ್ಲಿ ಇಲ್ಲಿಯವರೆಗೆ ನೀಡಲಾಗಿದೆ.

2008–09ನೇ ಸಾಲಿನಲ್ಲಿ (31–12–2008) ವರೆಗೆ 4337.65 ಕೋಟಿಗಳಷ್ಟು ಬಂಡವಾಳ ಹೂಡಲಾಗಿದ್ದು ರೂ.6010.85 ಕೋಟಿಗಳಷ್ಟು ರಫ್ತು ನಡೆದಿದೆ. ಪ್ರಾಥಮಿಕ ಅನುಮೋದನೆ ನೀಡಿರುವ ವಿಶೇಷ ಆರ್ಥಿಕ ವಲಯ ಘಟಕಗಳ ವಿವರವು ಅನುಬಂಧ –6ರಲ್ಲಿ ಲಗತ್ತಿಸಲಾಗಿದೆ.

**ಡಿ) ಅಸೈಡ್ ಯೋಜನೆ:**

2002–03 ರಿಂದ ವಾಣಿಜ್ಯ ಮಂತ್ರಾಲಯ ಭಾರತ ಸರ್ಕಾರವು ರಫ್ತು ಅಭಿವೃದ್ಧಿಯ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಹಾಗೂ ಅದಕ್ಕೆ ಸಂಬಂಧಪಟ್ಟ ಚಟುವಟಿಕೆಗಳನ್ನು ಉತ್ತೇಜಿಸಿ ಪ್ರತಿ ರಾಜ್ಯದ ರಫ್ತು ಕಾರ್ಯನಿರ್ವಹಣೆಯನ್ನು ಉತ್ತೇಜಿಸಲು ಈ ಯೋಜನೆಯನ್ನು ಜಾರಿಗೊಳಿಸಿದೆ. ಈ ಯೋಜನೆಯ ಉದ್ದೇಶವು ರಾಜ್ಯಗಳ ರಫ್ತುನ್ನು ಉತ್ತೇಜಿಸಲು ಸಹಾಯವನ್ನು ನೀಡುವುದಲ್ಲದೆ ರಫ್ತು ಬೆಳವಣಿಗೆಗೆ ಪ್ರಾಮುಖ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಾಗಿರುತ್ತದೆ. 2008–09ನೇ ಸಾಲಿನಲ್ಲಿ 18 ಯೋಜನೆಗಳಿಗೆ ಕಾರ್ಯಗತಗೊಳಿಸಲಾಗಿದೆ. ಭಾರತ ಸರ್ಕಾರವು ರೂ.4162 ಕೋಟಿಗಳಷ್ಟು ಹಣವನ್ನು ಮಾರ್ಚ್ 2009ರ ಅಂತ್ಯಕ್ಕೆ ಬಿಡುಗಡೆ ಮಾಡಿದೆ.

ವಿಶ್ವೇಶ್ವರಯ್ಯ ಕೈಗಾರಿಕಾ ವ್ಯಾಪಾರ ಸಂಸ್ಥೆಯು ಅಸೈಡ್ ಯೋಜನೆಯನ್ನು ಜಾರಿಗೊಳಿಸುವ ಅನುಷ್ಠಾನ ಸಂಸ್ಥೆಯಾಗಿದೆ. ಈ ಯೋಜನೆಯಡಿಯಲ್ಲಿ ಬರುವಂತಹ ಪ್ರಸ್ತಾವನೆಗಳನ್ನು ಕರ್ನಾಟಕ ರಾಜ್ಯದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ರಾಜ್ಯಮಟ್ಟದ ರಫ್ತು ಉತ್ತೇಜನ ಸಮಿತಿಯು ಪರಿಶೀಲಿಸಿ ಅಸೈಡ್ ಮಾರ್ಗಸೂಚಿಯ ಪ್ರಕಾರ ಅನುಮೋದಿಸಲ್ಪಡುತ್ತವೆ.

**ಇ) ಆಹಾರ ಸಂಸ್ಕರಣ ಕೈಗಾರಿಕಾ ಪಾರ್ಕ್:**

ಆಹಾರ ಸಂಸ್ಕರಣ ಕೈಗಾರಿಕೆಗಳ ಸಚಿವಾಲಯ ಭಾರತ ಸರ್ಕಾರದಿಂದ ಅನುಮೋದಿಸಲ್ಪಟ್ಟ 6 ಆಗ್ರೋ ಆಹಾರ ಸಂಸ್ಕರಣ ಪಾರ್ಕ್‌ಗಳಾದ ಮಾಲೂರು, ಹಿರಿಯೂರು, ಬಾಗಲಕೋಟೆ, ಮದ್ದೂರು, ಜೇವರ್ಗಿ, ಬೆಳಗಾಂನೊಂದಿಗೆ ಒಂದು ಹೊಸ ಆಗ್ರೋ ಆಹಾರ ಸಂಸ್ಕರಣ ಪಾರ್ಕ್‌ನ್ನು ಶಿವಮೊಗ್ಗದಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. ರಾಜ್ಯ ಸರ್ಕಾರವು ಮೆ: ಎಫ್‌ಕೆಎಲ್ ರವರಿಗೆ ರೂ.200.00 ಲಕ್ಷಗಳನ್ನು ಈ ಯೋಜನೆಯ ಅನುಷ್ಠಾನಕ್ಕಾಗಿ 2008–09ನೇ ಸಾಲಿನಲ್ಲಿ ಬಿಡುಗಡೆಗೊಳಿಸಿದೆ.

*****

### 3. ಸಣ್ಣ ಮತ್ತು ಗ್ರಾಮೀಣ ಕೈಗಾರಿಕಾ ವಲಯದ ಚಟುವಟಿಕೆಗಳು

**ಎ) ಹೊಸ ಕೈಗಾರಿಕಾ ನೀತಿ:** ಕರ್ನಾಟಕ ಸರ್ಕಾರವು ಹೊಸ ಕೈಗಾರಿಕಾ ನೀತಿ 2009–2014ನ್ನು ತನ್ನ ಆದೇಶ ಸಂಖ್ಯೆ ಸಿಐ 233 ಎಸ್‌ಪಿಐ 08 ದಿನಾಂಕ 28–2–2009ರಲ್ಲಿ ಪ್ರಸ್ತುತ ಪಡಿಸಿದೆ. ಈ ನೀತಿಯ ಪ್ರಮುಖ ಅಂಶಗಳು ಈ ಕೆಳಗಿನಂತಿದೆ.

- ಮಾನವ ಸಂಪನ್ಮೂಲ ಹಾಗೂ ಸ್ವಭಾವಿಕ ಸಂಪನ್ಮೂಲಗಳನ್ನು ವ್ಯವಸ್ಥಿತ ವೈಜ್ಞಾನಿಕ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದರ ಮುಖಾಂತರ ಕರ್ನಾಟಕವನ್ನು ಸಂಪತ್‌ಭರಿತ ರಾಜ್ಯವನ್ನಾಗಿ ನಿರ್ಮಿಸುವುದು.
- ಮುಂದಿನ 5 ವರ್ಷಗಳಲ್ಲಿ 10.00 ಲಕ್ಷ ಜನರಿಗೆ ಹೆಚ್ಚುವರಿ ಉದ್ಯೋಗಾವಕಾಶವನ್ನು ಕಲ್ಪಿಸುವ ಗುರಿಯನ್ನು ಹೊಂದಿದೆ.
- ರಾಜ್ಯದ ಜಿಡಿಪಿಯನ್ನು 2014ರೊಳಗೆ 20 ರಷ್ಟು ಕೈಗಾರಿಕಾ ಬೆಳವಣಿಗೆ ಮುಖಾಂತರ ಹೆಚ್ಚಿಸುವುದಾಗಿರುತ್ತದೆ.
- ಕೈಗಾರಿಕಾ ಬೆಳವಣಿಗೆಗಾಗಿ ರಾಜ್ಯದೆಲ್ಲಡೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಒತ್ತು ನೀಡುವಿಕೆ.
- ಕೆಐಎಡಿಬಿ ಮುಖಾಂತರ 1000 ದಿಂದ 2000 ಎಕರೆಯಷ್ಟು ಭೂಮಿಯನ್ನು ಪ್ರತಿ ಜಿಲ್ಲೆಗಳಲ್ಲೂ ಸ್ವಾಧೀನಪಡಿಸಿಕೊಳ್ಳಲು ರೂ.1000 ಕೋಟಿಗಳನ್ನು ಹಂಚಿಕೆ ಮಾಡಲಾಗುವುದು. ಇದರಿಂದಾಗಿ ಸಾವಿರಾರು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ರಾಜ್ಯದಲ್ಲಿ ಸ್ಥಾಪಿಸಲ್ಪಡುವುದು. ವಿದೇಶಿ ಬಂಡವಾಳವನ್ನು ಆಕರ್ಷಿಸುವುದಕ್ಕಾಗಿ ಕೈಗಾರಿಕಾ ಪಟ್ಟಣಗಳನ್ನು ಸ್ಥಾಪಿಸುವ ಪ್ರಸ್ತಾವನೆ ಕೂಡ ಇದೆ.
- ರಾಜ್ಯದ್ಯಾದಂತ ಸುವರ್ಣ ಕರ್ನಾಟಕ ಅಭಿವೃದ್ಧಿ ಕಾರಿಡಾರ್ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುವುದು.
- ಉಕ್ಕು, ಸಿಮೆಂಟ್, ಸಕ್ಕರೆ, ಅಟೋಮೋಬೈಲ್, ಆಹಾರ ಪರಿಷ್ಕರಣೆ ಸಿದ್ದ ಉಡುಪು ತಯಾರಿ ಮುಂತಾದ ಕೈಗಾರಿಕಾ ಚಟುವಟಿಕೆಗಳ ವಿಶೇಷ ವಲಯಗಳನ್ನು ಅಭಿವೃದ್ಧಿ ಪಡಿಸುವುದು.
- ಉದ್ಯಮಿಗಳನ್ನು ಉತ್ತೇಜಿಸಲು ಜಿಲ್ಲಾ ಕೈಗಾರಿಕಾ ಕೇಂದ್ರಗಳಲ್ಲಿರುವ ಮಾರ್ಗದರ್ಶಿ ಕೋಶಗಳ ಬಲವರ್ಧನೆ. ಈ ಕೋಶವು ಉದ್ಯಮಿಗಳನ್ನು ಪ್ರಾರಂಭದಿಂದ ಕೈಗಾರಿಕಾ ಸ್ಥಾಪನೆಯ ಅಂತ್ಯದ ಹಂತದವರೆಗೆ ಸಹಾಯವನ್ನು ನೀಡುತ್ತದೆ.

**ಬಿ) ವಿಷನ್ ಗ್ರೂಪನ್ ಸಂಯೋಜನೆ:**

ಕರ್ನಾಟಕದ ತ್ವರಿತ ಕೈಗಾರಿಕೀಕರಣಕ್ಕಾಗಿ ಹಾಗೂ ಕೈಗಾರಿಕಾಭಿವೃದ್ದಿಯ ನೀತಿ ನಿಯಮಗಳ ತಯಾರಿಕೆಯಲ್ಲಿ ಮಾರ್ಗದರ್ಶನವನ್ನು ನೀಡಲು ಶ್ರೀ ಕ್ರಿಸ್ ಗೋಪಾಲಕೃಷ್ಣನ್, ಸಿಇಓ ಇನ್‌ಫೋಷಿಸ್ ಅವರ ಅಧ್ಯಕ್ಷತೆಯಲ್ಲಿ ವಿಷನ್ ಗ್ರೂಪನ್ನು ಸಂಯೋಜಿಸಲಾಗಿದೆ. 2008–09ನೇ ಸಾಲಿನಲ್ಲಿ ವಿಷನ್ ಗ್ರೂಪನ್ ಮೂರು ಸಭೆಗಳು ನಡೆದಿವೆ.

**ಸಿ) ಕೈಗಾರಿಕಾ ಅದಾಲತ್ :**

ಕರ್ನಾಟಕ ಸರ್ಕಾರವು ಕೈಗಾರಿಕೋದ್ಯಮಿಗಳ ಸಮಸ್ಯೆಗಳನ್ನು ಬಗೆಹರಿಸಲು ವಿವಿಧ ಕ್ಷೇತ್ರಗಳಲ್ಲಿ ಅವರು ಅನುಭವಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವ ಉದ್ದೇಶದಿಂದ ದಿನಾಂಕ 10–2–2009ರಂದು ಬೆಳಗಾಂ ವಿಭಾಗದ ಕೈಗಾರಿಕಾ ಅದಾಲತ್‌ನ್ನು ಧಾರವಾಡದಲ್ಲಿ ನಡೆಸಲಾಯಿತು. ಈ ಕಾರ್ಯಕ್ರಮವು ಒಂದು ಯಶಸ್ವಿ ಕಾರ್ಯಕ್ರಮವಾಗಿದೆ. ಈ ಕೈಗಾರಿಕಾ ಅದಾಲತ್‌ನಲ್ಲಿ ಬೇರೆ ಬೇರೆ ಇಲಾಖೆ, ನಿಗಮ ಮಂಡಳಿಗಳಿಂದ 207 ಅರ್ಜಿಗಳನ್ನು ಪಡೆದಿದ್ದು ಅದರಲ್ಲಿ 90 ಅರ್ಜಿಗಳ ವಿಲೇವಾರಿಯು ಆ ಸ್ಥಳದಲ್ಲಿ ಆಗಿರುತ್ತದೆ. ಕೈಗಾರಿಕಾದ್ಯೋಮಿಗಳ ಉಳಿದ ಸಮಸ್ಯೆಗಳನ್ನು ವಿವರವಾದ ಪರಿವೀಕ್ಷಣೆಯ ನಂತರ ಬಗೆ ಹರಿಸುವುದಾಗಿ ಆಶ್ವಾಸನೆ ನೀಡಲಾಗಿದೆ. ಮುಂದುವರೆದಂತೆ ಇಂತಹ ಅದಾಲತ್‌ನ್ನು ಉಳಿದ ವಿಭಾಗದಲ್ಲೂ ಮಾಡಿ ಕೈಗಾರಿಕೋದ್ಯಮಿಗಳ ಸಮಸ್ಯೆಗಳನ್ನು ಬಗೆ ಹರಿಸುವ ಉದ್ದೇಶವಿದೆ.

**ಡಿ) 4ನೇ ಅಖಿಲ ಭಾರತ ಎಂಎಸ್‌ಎಂಇ ಘಟಕಗಳ ಗಣತಿ :**

2008–09ನೇ ಸಾಲಿನಲ್ಲಿ ಅಖಿಲ ಭಾರತ ಎಂಎಸ್‌ಎಂಇ ಘಟಕಗಳ ಗಣತಿಯನ್ನು ಸಿಎಸ್‌ಓ ನ್ಯೂ ಡೆಲ್ಲಿ ರವರ ಮಾರ್ಗದರ್ಶನದಲ್ಲಿ ನಡೆಸಲಾಯಿತು. ಈ ಯೋಜನೆಯ ಉದ್ದೇಶವೇನೆಂದರೆ ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಗಣತಿ ನಡೆಸಿ ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ವರ್ಗದ ಕೈಗಾರಿಕೆಗಳ ಡಾಟಾವನ್ನು ಅಪ್‌ಡೇಟ್ ಮಾಡುವುದು ಹಾಗೂ ಉತ್ಪಾದನೆ, ಘಟಕವು ಮುಚ್ಚಿದ ಹಾಗೂ ಇತರ ಸಂಬಂಧಿತ ಆರ್ಥಿಕ ಪ್ಯಾರಾಮೀಟರ್‌ನ್ನು ಕೂಡ ನಿಗದಿತ ನಮೂನೆಯಲ್ಲಿ ತುಂಬಿಸುವುದು. ಮಾರ್ಚ್ 2007ರ ವರೆಗೆ ನೊಂದಣಿಯಾದ ಎಂಎಸ್‌ಎಂಇ ಘಟಕಗಳ ವಿವರಗಳನ್ನು 4ನೇ ಅಖಿಲ ಭಾರತ ಎಂಎಸ್‌ಎಂಇ ಗಣತಿಯಲ್ಲಿ ಒಳಗೊಂಡಿದೆ. 1,96,027 ಎಂಎಸ್‌ಎಂಇ ಘಟಕಗಳ ಮಾಹಿತಿಯನ್ನು ಕ್ರೋಢಿಕರಿಸಿ ಷೆಡ್ಯುಲ್‌ಗಳಲ್ಲಿ ತುಂಬಲಾಗಿದೆ. 1,82,64 ಘಟಕಗಳ ಮಾಹಿತಿಯನ್ನು ಮುಂದಿನ ಕ್ರಮಕ್ಕಾಗಿ ಹೊಸ ದೆಹಲಿಗೆ ಕಳುಹಿಸಿ ಕೊಡಲಾಗಿದೆ.

**4. ಕೈಗಾರಿಕಾ ಅಭಿವೃದ್ಧಿ ಚಟುವಟಿಕೆಗಳು**

**ಎ) ಕೈಗಾರಿಕಾ ವಿಕಾಸ:** ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸುವ ಉದ್ದೇಶದಿಂದ ಡಾ.ಡಿ.ಎಂ.ನಂಜುಂಡಪ್ಪ ಸಮಿತಿಯ ವರದಿಯಂತೆ 79 ಅತಿ ಹೆಚ್ಚು ಹಿಂದುಳಿದ ಹಾಗೂ ಹಿಂದುಳಿದ ತಾಲ್ಲೂಕುಗಳನ್ನು ಗುರುತಿಸಲಾಗಿದೆ. ಈ ಯೋಜನೆಯು ಸ್ಥಳೀಯ ಸಂಪನ್ಮೂಲಗಳನ್ನು ಅಲ್ಲಿಯ ಕುಶಲತೆ ಹಾಗೂ ಮೂಲಭೂತ ಸೌಕರ್ಯಗಳನ್ನು ದೃಷ್ಠಿಯಲ್ಲಿಟ್ಟುಕೊಂಡು ಕೈಗಾರಿಕೆಗಳ ಅಭಿವೃದ್ಧಿಗೆ ಉತ್ತೇಜನ ನೀಡುವುದು.

ಈ ಕೆಳಗಿನ ಆಭಿವೃದ್ಧಿ ಸಂಸ್ಥೆಗಳನ್ನು ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಗುರುತಿಸಲಾಗಿದೆ.

- **ಕೆಎಸ್ಎಸ್ಐಡಿಸಿ ಮತ್ತು ಕೆಐಎಡಿಬಿ:** ಹೊಸ ಕೈಗಾರಿಕಾ ಪ್ರದೇಶ/ವಸಾಹತುಗಳನ್ನು ಅಭಿವೃದ್ಧಿ ಪಡಿಸುವುದರೊಂದಿಗೆ ಹಾಲಿ ಇರುವ ಕೈಗಾರಿಕಾ ಪ್ರದೇಶ/ವಸಾಹತುಗಳ ಉನ್ನತೀಕರಿಸುವುದಾಗಿರುತ್ತದೆ.
- **ಕೆಎಸ್ಪಿಡಿಸಿ ಹಾಗೂ ಕೆಹೆಚ್‌ಡಿಸಿ** : ಸಾಮಾನ್ಯ ಸೌಲಭ್ಯ ಕೇಂದ್ರಗಳನ್ನು ಕಟ್ಟುವುದು. ಹಾಗೂ ವಸತಿ ಕಾರ್ಯಗಾರ ಪವರ್‌ಲೂಂ / ಹ್ಯಾಂಡ್‌ಲೂಂ ಸಂಕೀರ್ಣಗಳನ್ನು ನಿರ್ಮಿಸುವುದು. ಯಂತ್ರೋಪಕರಣಗಳ ಆಧುನೀಕರಣ ತರಬೇತಿ ಇತ್ಯಾದಿ.
- **ಕೆಎಸ್ಸಿಡಿಸಿ:** ನಾರು ಗುಂಪು ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವುದು ಹಾಗೂ ತರಬೇತಿ ಮತ್ತು ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸುವುದು.
- **ಸಿಡಾಕ್ ಮತ್ತು ಟೆಕ್ಸಾಕ್ :** ಉದ್ಯಮಶೀಲತಾ ಅಭಿವೃದ್ದಿ ಕಾರ್ಯಕ್ರಮಗಳು/ಇಎಪಿ ಕುಶಲತೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಸಂಪನ್ಮೂಲ ನಕ್ಷೆಗಳನ್ನು ತಯಾರಿಸುವುದು ಇತ್ಯಾದಿ.

**2008–09**ನೇ ಸಾಲಿನಲ್ಲಿ ರೂ.370.00 ಲಕ್ಷಗಳ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ಕೆಳಕಂಡ ನಿಗಮ ಮತ್ತು ಮಂಡಳಿಗಳಿಗೆ ಬಿಡುಗಡೆ ಮಾಡಲಾಗಿದೆ.

| **ಕ್ರ.ಸ** | **ಸಂಸ್ಥೆಗಳು** | **ಮೊತ್ತ ರೂ.ಲಕ್ಷಗಳಲ್ಲಿ** |
|---|---|---|
| 1 | ಕೆಎಸ್ಸಿಡಿಸಿ | 25.00 |
| 2 | ಟೆಕ್ಸಾಕ್ | 25.00 |
| 3 | ಸಿಡಾಕ್ | 50.00 |
| 4 | ಕೆಎಸ್ಪಿಡಿಸಿ | 106.67 |
| 5 | ಕೆಎಸ್ಎಸ್ಐಡಿಸಿ | 100.00 |
| 6 | ಕೆಐಎಡಿಬಿ | 30.41 |
| 7 | ಕೆಹೆಚ್‌ಡಿಸಿ | 32.921 |
| | **ಒಟ್ಟು** | **370.00** |

**ಬಿ)ಸಣ್ಣ ಕೈಗಾರಿಕೆ ಹಾಗೂ ಅತಿ ಸಣ್ಣ ಕೈಗಾರಿಕಾ ಘಟಕಗಳಿಗೆ ರಾಜ್ಯ ಬಂಡವಾಳ ಸಹಾಯ ಅನುದಾನ :**

1–1–1999 ರಿಂದ 31–3–2005ರ ವರೆಗು ಸಹಾಯಧನ ಮಂಜೂರಾಗಿ, ಅನುದಾನ ಬಿಡುಗಡೆಗಾಗಿ ಬಾಕಿ ಉಳಿದಿದ್ದ 5203 ಘಟಕಗಳಿಗೆ ಬಂಡವಾಳ ಸಹಾಯ ಅನುದಾನ ರೂ.100.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

**ಸಿ) ಪ್ರಧಾನ ಮಂತ್ರಿಗಳ ರೋಜಗಾರ್ ಯೋಜನೆ:**

ಈ ಯೋಜನೆಯು ಪ್ರಸಕ್ತ ಸಾಲಿನಿಂದ ಮುಂದುವರೆದ ಯೋಜನೆಯಾಗಿಲ್ಲ. ಇದರ ಬದಲಾಗಿ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಎಂಬ ಹೊಸ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರವು ಜಾರಿಗೊಳಿಸಿದೆ.

**ಡಿ) ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಕಾರ್ಯಕ್ರಮ :**

ದಿನಾಂಕ 15-8-2008 ರಿಂದ ಜಾರಿಗೆ ಬರುವಂತೆ ಭಾರತ ಸರ್ಕಾರವು ಈ ಹೊಸ ಯೋಜನೆಯನ್ನು ಪ್ರಚಾರ ಪಡಿಸಿದೆ. ಈ ಯೋಜನೆಯು ನಿರುದ್ಯೋಗಿ ಯುವಕರಿಗೆ ಸ್ವ ಉದ್ಯೋಗವನ್ನು ಕಲ್ಪಿಸುವ ಸಲುವಾಗಿ ಆರ್ಥಿಕ ಸಹಾಯವನ್ನು ನೀಡಿ ಅವರುಗಳು ತಮ್ಮದೆ ಆದ ಕೈಗಾರಿಕಾ/ವ್ಯಾಪಾರ/ಸೇವಾ ಕ್ಷೇತ್ರಗಳನ್ನು ಪ್ರಾರಂಭಿಸಬಹುದಾಗಿದೆ. ಈ ಯೋಜನೆಯು ಗ್ರಾಮೀಣ ಕುಶಲ ಕರ್ಮಿಗಳಿಗೆ ಉದ್ಯೋಗವನ್ನು ಸೃಷ್ಟಿಸುವ ಮುಖಾಂತರ ಅವರನ್ನು ಹಳ್ಳಿಯಿಂದ ಪಟ್ಟಣಗಳಿಗೆ ವಲಸೆ ಹೋಗುವುದನ್ನು ತಡೆಯುತ್ತದೆ. ಹಾಗೂ ರೂ. 14.28 ಕೋಟಿಗಳನ್ನು ಹಂಚು ಸಹಾಯಧನವನ್ನಾಗಿ ಇಡಲಾಗಿದೆ. ಎಲ್ಲಾ ಜಿಲ್ಲಾ ಕೈಗಾರಿಕಾ ಕೇಂದ್ರಗಳು ಗುರಿಗಳನ್ನು ಹೊಂದಿವೆ. ಈ ಯೋಜನೆಗೆ ಉತ್ತಮ ಪ್ರಚಾರವನ್ನು ನೀಡಲಾಗಿದೆ. ಪ್ರಸಕ್ತ ಸಾಲಿನಲ್ಲಿ 940 ಫಲಾನುಭವಿಗಳಿಗೆ 864 ಲಕ್ಷಗಳಷ್ಟು ಅಂಚಿನ ಹಣ ಮಂಜೂರು ಮಾಡಲಾಗಿದೆ.

**ಇ) ವಿಶ್ವ ಯೋಜನೆ :**

ಗ್ರಾಮೀಣ ಸ್ಥಳಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಸತತವಾಗಿ ಗ್ರಾಮೀಣ ಪ್ರದೇಶದ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡುವ ಯೋಜನೆಯು ವಿಶ್ವ ಯೋಜನೆಯಾಗಿದೆ. ಈ ಯೋಜನೆಯಡಿಯಲ್ಲಿ ಸಂಘ/ಸಂಸ್ಥೆಗಳಿಗೆ, ತರಬೇತಿಗಾಗಿ, ಉತ್ಪಾದನ ಕೇಂದ್ರಗಳ ಸ್ಥಾಪನೆಗೆ, ಹಾಗೂ ಪೂರಕ ಸೇವೆಗಳಾದ ಕಚ್ಚಾ ಸಾಮಗ್ರಿಗಳ ಸರಬರಾಜು ಮತ್ತು ಮಾರುಕಟ್ಟೆ ಅಭಿವೃದ್ದಿಗೆ ಧನಸಹಾಯ ಒದಗಿಸಲಾಗುವುದು. ಡಿಎಸ್ಎಂಎಸ್ ಮುಖಾಂತರ ಅಥವಾ ನಿಗಮ ಮತ್ತು ಮಂಡಳಿಗಳ ಮುಖಾಂತರ ಮಾರುಕಟ್ಟೆ ಸಹಾಯಧನ ನೀಡುವುದು ಇತ್ಯಾದಿಗಳನ್ನು ಒಳಗೊಂಡಿದೆ. ತರಬೇತಿ ಮತ್ತು ಕುಶಲತೆಯ ಅಭಿವೃದ್ದಿಯ ಕಾರ್ಯಕ್ರಮಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮೂಲಕ ಅಥವಾ ರಾಜ್ಯ ಮಟ್ಟದ ನಿಗಮ ಮತ್ತು ಮಂಡಳಿಗಳ ಮೂಲಕ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ರೂ.1.73,000/- ಗಳನ್ನು 2 ಸಂಸ್ಥೆಗೆ ವಿವಿಧ ಕಾರ್ಯಕ್ರಮಕ್ಕಾಗಿ ನೀಡಲಾಗಿದೆ.

| | |
|---|---|
| 1) ಸೆಂಟ್ರಲ್ ಮೈನಾರಿಟೀಸ್ ಅಸೋಸಿಯೇಷನ್ ಬೆಳಗಾಂ - ಮೂಲಭೂತ ಸೌಕರ್ಯ ಮತ್ತು ತರಬೇತಿಗಾಗಿ | 1.22 ಲಕ್ಷಗಳು |
| 2) ಗ್ರಾಮೀಣ ಮಾನವ ಸಂಪನ್ಮೂಲ ಹಾಗೂ ತಾಂತ್ರಿಕ ಪ್ರತಿಷ್ಠಾನ ತರಬೇತಿಗಾಗಿ | 0.519 ಲಕ್ಷಗಳು |
| | -------- |
| | ಒಟ್ಟು ರೂ. 1.739 ಲಕ್ಷಗಳು |
| | ----------- |

**ಎಫ್) ಕಾಯಕನಗರ:**

ಕಾಯಕನಗರ ಯೋಜನೆಯು ವಿವಿಧ ಕಸಬುಗಳಲ್ಲಿ ನಿರತರಾದ ಸಾಂಪ್ರದಾಯಿಕ ಕುಶಲಕರ್ಮಿಗಳಿಗೆ ಅಂದರೆ ಬಂಬು ಕೆಲಸಗಾರರು, ಶೀಟ್‌ಮೆಟಲ್ ಮತ್ತು ಬ್ರಾಸ್ ಕೆಲಸಗಾರರು, ಚಪ್ಪಲಿ ತಯಾರಕರು, ಶೀಟ್ ಮೆಟಲ್, ಪಿಂಜರಾ ಟೈಲರ್‌ಗಳು ಹಾಗೂ ಇನ್ನು ಅನೇಕ ಕಸುಬುದಾರರಿಗೆ ವಸತಿ ಮತ್ತು ಕಾರ್ಯಗಾರಗಳನ್ನು ನೀಡುವುದಾಗಿರುತ್ತದೆ. 3 ಕಾಯಕನಗರ ಕೇಂದ್ರಗಳನ್ನು ಧಾರವಾಡ ಜಿಲ್ಲೆಯ ನರೇಂದ್ರ ಗ್ರಾಮ, ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ಮತ್ತು ಬೆಳಗಾವಿ ಜಿಲ್ಲೆಯ ರಾಮದುರ್ಗಗಳಲ್ಲಿ ಸ್ಥಾಪಿಸಲು ಯೋಜಿಸಲಾಗಿದೆ. ಈ 3 ಕೇಂದ್ರಗಳಲ್ಲಿ 557 ಕುಶಲ ಕರ್ಮಿಗಳಿಗೆ ವಸತಿ ಕಾರ್ಯಗಾರಗಳನ್ನು ಒದಗಿಸುವ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ. ನರೇಂದ್ರ ಗ್ರಾಮದಲ್ಲಿ 411 .ರಾಮದುರ್ಗದಲ್ಲಿ 57 ಮತ್ತು ಹೂವಿನ ಹಡಗಲಿಯಲ್ಲಿ 89 ವಸತಿ ಕಾರ್ಯಗಾರಗಳ ನಿರ್ಮಾಣ ಕಾರ್ಯವನ್ನು ರಾಜೀವಗಾಂಧಿ ವಸತಿ ನಿಗಮಕ್ಕೆ ಹಾಗು ಮೂಲಭೂತ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಕೆಎಸ್‌ಎಸ್‌ಐಡಿಸಿಗೆ ವಹಿಸಿಕೊಡಲಾಗಿದೆ.

2008-09ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯ ನರೇಂದ್ರ ಗ್ರಾಮದ 76 ವಸತಿ ಕಾರ್ಯಗಾರಗಳಿಗೆ ವಿದ್ಯುಚ್ಛಕ್ತಿ ಸಂಪರ್ಕ ಒದಗಿಸುವ ಸಲುವಾಗಿ ರೂ.10.00 ಲಕ್ಷ ಹಾಗೂ ಯೋಜನೆಯನ್ನು ಪೂರ್ಣಗೊಳಿಸಲು ರಸ್ತೆ ಹಾಗೂ ರಸ್ತೆ ಬದಿ ಮಳೆನೀರು ಚರಂಡಿ ನಿರ್ಮಾಣಕ್ಕಾಗಿ ರೂ.47.7192 ಲಕ್ಷ ಒಟ್ಟು ರೂ.57.7192 ಲಕ್ಷಗಳನ್ನು ಕೆಎಸ್‌ಎಸ್‌ಐಡಿಸಿ ರವರಿಗೆ ಹಾಗೂ ವಸತಿ ಕಾರ್ಯಾಗಾರಗಳ ಸೆಪ್ಟಿಕ್ ಟ್ಯಾಂಕ್ ಮತ್ತು ಸೋಕ್ ಪಿಟ್ ನಿರ್ಮಾಣಕ್ಕಾಗಿ ರೂ.7.60 ಲಕ್ಷಗಳನ್ನು ನಿರ್ಮಿತಿ ಕೇಂದ್ರ ಧಾರವಾಡ ರವರಿಗೆ ಬಿಡುಗಡೆ ಮಾಡಲಾಗಿದೆ.

**ಜಿ) ವಿಶೇಷ ಘಟಕ ಯೋಜನೆ :**

2008-09ನೇ ಸಾಲಿನಲ್ಲಿ ಹೊಸ ಕೈಗಾರಿಕಾ ಸಮೂಹದ ಸ್ಥಾಪನೆ ಯೋಜನೆಯಡಿಯಲ್ಲಿ ರೂ.821.852 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಈ ಯೋಜನೆಯಡಿಯಲ್ಲಿ ತರಬೇತಿ, ವಸತಿ ಕಾರ್ಯಗಾರಗಳ ನಿರ್ಮಾಣ ಹಾಗೂ ಸುಧಾರಿತ ಟೂಲ್ ಕಿಟ್‌ಗಳ ವಿತರಣೆಯನ್ನು ಪರಿಶಿಷ್ಟ ಜಾತಿಯ ಕುಶಲ ಕರ್ಮಿಗಳಿಗೆ ಜಿಲ್ಲಾ ಕೈಗಾರಿಕಾ ಕೇಂದ್ರಗಳು, ನಿಗಮ ಮತ್ತು ಮಂಡಳಿಗಳ ಮುಖಾಂತರ ನೀಡಲಾಗುತ್ತದೆ.

**ಹೆಚ್) ಗಿರಿಜನ ಉಪಯೋಜನೆ:**

2008-09ನೇ ಸಾಲಿನಲ್ಲಿ ಹೊಸ ಕೈಗಾರಿಕಾ ಸಮೂಹದ ಸ್ಥಾಪನೆ ಯೋಜನೆಯಡಿಯಲ್ಲಿ ರೂ.314.08 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಈ ಯೋಜನೆಯಡಿಯಲ್ಲಿ ತರಬೇತಿ, ವಸತಿ ಕಾರ್ಯಗಾರಗಳ ನಿರ್ಮಾಣ ಹಾಗೂ ಸುಧಾರಿತ ಟೂಲ್ ಕಿಟ್‌ಗಳ ವಿತರಣೆಯನ್ನು ಪರಿಶಿಷ್ಟ ಪಂಗಡ ಕುಶಲ ಕರ್ಮಿಗಳಿಗೆ ಜಿಲ್ಲಾ ಕೈಗಾರಿಕಾ ಕೇಂದ್ರಗಳು, ನಿಗಮ ಮತ್ತು ಮಂಡಳಿಗಳ ಮುಖಾಂತರ ನೀಡಲಾಗುತ್ತದೆ.

**5) ಮಾನವ ಸಂಪನ್ಮೂಲ ಅಭಿವೃದ್ಧಿ ಚಟುವಟಿಕೆಗಳು:**

**ಎ) ಸುವರ್ಣ ಕಾಯಕ ಕೌಶಲ್ಯ ಅಭಿವೃದ್ಧಿ ಯೋಜನೆ:**

ಕೈಗಾರಿಕಾ ನೀತಿ 2006–11 ಹಾಗೂ 2009–14ರಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಆಗಾಗಿ ಸರ್ಕಾರವು ಕುಶಲತಾ ಅಭಿವೃದ್ಧಿ ಸಂಸ್ಥೆಗಳನ್ನು ಮುಖ್ಯವಾದ ಸ್ಥಳಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ಸಹಭಾಗಿತ್ವದ ಮೂಲಕ ತರಬೇತಿ ಕೇಂದ್ರಗಳನ್ನು ಸ್ಥಾಪನೆ ಮಾಡಲು ನೆರವು ನೀಡುತ್ತದೆ. ಸರ್ಕಾರವು ಈ ಯೋಜನೆಯ ಅನುಷ್ಠಾನಕ್ಕಾಗಿ ಭೂಮಿಯನ್ನು ಹಾಗೂ ಮೂಲಭೂತ ಸೌಕರ್ಯಗಳಿಗಾಗಿ ಆರ್ಥಿಕ ಸಹಾಯವನ್ನು ಈ ಕೆಳಕಂಡಂತೆ ನೀಡಲಾಗುವುದು.

1. ನಿರ್ದಿಷ್ಟ ಕ್ಷೇತ್ರದಲ್ಲಿ ತರಬೇತಿಗಾಗಿ ಕೇಂದ್ರವನ್ನು ಸ್ಥಾಪಿಸುವುದಾದಲ್ಲಿ ಅವಶ್ಯಕತೆಗೆ ತಕ್ಕಂತೆ 5 ಎಕರೆಗಳಿಗೆ ಸರ್ಕಾರಿ ಜಮೀನು ಒದಗಿಸುವುದು ಹಾಗೂ ಅದರೊಂದಿಗೆ ಕ್ಯಾಪಿಟಲ್ ವೆಚ್ಚದ ಸಲುವಾಗಿ ಯೋಜನಾ ವೆಚ್ಚದ ಶೇಕಡ 50 ರಷ್ಟನ್ನು ರೂ 2.00 ಕೋಟಿಗಳಿಗೆ ಮೀರದಂತೆ ಅನುದಾನವನ್ನು ಒದಗಿಸುವುದು.

1. ತರಬೇತಿ ಕೇಂದ್ರವನ್ನು ನಡೆಸಲು ಅವರ್ತಕ ವೆಚ್ಚವಾಗಿ ಪ್ರತಿ ಅಭ್ಯರ್ಥಿಗೆ ಪ್ರತಿ ಕೋರ್ಸ್‌ಗೆ ರೂ.750/– ರಂತೆ 3 ವರ್ಷಗಳವರೆಗೆ ಪ್ರತಿ ವರ್ಷಕ್ಕೆ ರೂ.15.00 ಲಕ್ಷಗಳಿಗೆ ಮೀರದಂತೆ ಹಣಕಾಸು ಸೌಲಭ್ಯವನ್ನು ಒದಗಿಸುವುದು. ಈಗಾಗಲೇ ಒಟ್ಟು 22 ಸಂಸ್ಥೆ/ಘಟಕಗಳನ್ನು ರಾಜ್ಯ ಮಟ್ಟದ ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲಾಗಿದೆ. ಅವುಗಳಲ್ಲಿ 16 ಸಂಸ್ಥೆಗಳ ಮೂಲಕ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದ ಅನುಮೋದನೆ ಪಡೆದಿದ್ದು ಈ ಕೆಳಕಂಡ 5 ಸಂಸ್ಥೆಗಳು ತರಬೇತಿ ಕೇಂದ್ರ ಸ್ಥಾಪನೆಯು ವಿವಿಧ ಅನುಷ್ಠಾನ ಹಂತದಲ್ಲಿದೆ.

ಅ) ಬಿಎಲ್‌ಡಿಇ ಅಸೋಸಿಯೇಷನ್ಸ್ ಪಾಲಿಟೆಕ್ನಿಕ್, ಬಿಜಾಪುರ

ಆ) ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಮಂಡ್ಯ – ತರಬೇತಿ ಕೇಂದ್ರ ಸ್ಥಾಪಿಸಿ ತರಬೇತಿ ಕಾರ್ಯಕ್ರಮಗಳನ್ನು ಪ್ರಾರಂಬಿಸಿರುತ್ತಾರೆ.

ಇ) ಜೆಎಸ್‌ಎಸ್ ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್, ಚಾಮರಾಜನಗರ

ಈ) ಜೆಎಸ್‌ಎಸ್ ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್, ಮೈಸೂರು

ಉ) ಎನ್ ಎಸ್ ಇನ್‌ಪೋಟೆಕ್, ಹುಬ್ಬಳ್ಳಿ, ಧಾರವಾಡ

**ಬಿ) ಬೆಂಗಳೂರು ಮತ್ತು ಕಾರವಾರದಲ್ಲಿ ವಜ್ರ ಮತ್ತು ಆಭರಣ ತಯಾರಿ ತರಬೇತಿ ಸಂಸ್ಥೆಗಳು:**

ಪ್ರಸಕ್ತ ಸಾಲಿನಲ್ಲಿ ರೂ.1.00 ಲಕ್ಷಗಳನ್ನು ಕೆಎಸ್‌ಎಸ್‌ಐಡಿಸಿ, ಈ ಕಾರ್ಯಕ್ರಮದ ಅನುಷ್ಠಾನದ ನೋಡಲ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ. ಭೂಮಿಯನ್ನು ಗುರುತಿಸಬೇಕಾಗಿದೆ.

**ಸಿ) ಕರ್ನಾಟಕ ಚರ್ಮ ತಾಂತ್ರಿಕ ಸಂಸ್ಥೆ:**

ಈ ಸಂಸ್ಥೆಯ ಮುಖ್ಯ ಉದ್ದೇಶವು ತರಬೇತಿಯನ್ನು ನೀಡುವುದಾಗಿರುತ್ತದೆ. ಈ ಸಂಸ್ಥೆಯು ಚರ್ಮ ತಾಂತ್ರಿಕತೆಯಲ್ಲಿ ಮೂರುವರೆ ವರ್ಷ ಡಿಪ್ಲೋಮೊ ಕೋರ್ಸ್, ಮತ್ತು ಅಲ್ಪಾವಧಿಯ ತರಬೇತಿಗಳನ್ನು ಚರ್ಮ ಉಡುಗೆ, ಪಾದರಕ್ಷೆ, ಚರ್ಮ ಸಾಮಾಗ್ರಿಗಳನ್ನು ತಯಾರಿಸುವುದರಲ್ಲಿ

ನೀಡುತ್ತದೆ. ಈ ಸಂಸ್ಥೆಯು ಚರ್ಮ ಉತ್ಪನ್ನಗಳ ವಿನ್ಯಾಸ ಅಭಿವೃದ್ಧಿ ಮತ್ತು ಚರ್ಮ ಪರಿಕರಗಳ ಸಂಶೋಧನೆ ಮತ್ತು ಅಭಿವೃದ್ದಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಈ ಸಂಸ್ಥೆಯು ವಿದ್ಯಾರ್ಥಿಗಳಿಗೆ ಕೇಂದ್ರ ಚರ್ಮ ಸಂಶೋದನಾ ಸಂಸ್ಥೆ ಚೆನ್ನೈ ಅವರ ಸಹಯೋಗದೊಂದಿಗೆ ತರಬೇತಿಯನ್ನು ನೀಡುತ್ತದೆ. ಈ ಯೋಜನೆಯು ಕಚ್ಚಾ ಸಾಮಗ್ರಿಗಳ ವೆಚ್ಚ ಹಾಗೂ ಇತರೆ ಉಪಕರಣಗಳ ,ಸ್ಟೇಷನರಿ ಹಾಗೂ ನುರಿತ ಅತಿಥಿ ಉಪನ್ಯಾಸಕರಿಂದ ಉಪನ್ಯಾಸ, ಆಡಳಿತಾತ್ಮಕ ವೆಚ್ಚ, ಕೈಗಾರಿಕಾ ಘಟಕಗಳ ಭೇಟಿ ಮತ್ತು ನಿರ್ವಹಣಾ ವೆಚ್ಚಗಳನ್ನು ಒಳಗೊಂಡಿರುತ್ತದೆ.

ಪ್ರಸಕ್ತ ಸಾಲಿನಲ್ಲಿ ರೂ.40.00 ಲಕ್ಷಗಳನ್ನು ತರಬೇತಿ ಕಾರ್ಯಕ್ರಮಕ್ಕಾಗಿ ಹಾಗೂ ಆಡಳಿತಾತ್ಮಕ ವೆಚ್ಚಕ್ಕಾಗಿ ಕಿಲ್ಪ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

**ಡಿ) ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ) :**

ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರವು 1972ರಲ್ಲಿ ಕರ್ನಾಟಕ ಸರ್ಕಾರ ಮತ್ತು ಡ್ಯಾನಿಡಾ, ಡೆನಾರ್ಕ್ ಅವರ ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ಪ್ರಾರಂಭವಾಯಿತು. ಈ ಕೇಂದ್ರದಲ್ಲಿ ಟೂಲ್ ಇಂಜಿನಿಯರಿಂಗ್‌ನಲ್ಲಿ ತರಬೇತಿಯನ್ನು ಅತ್ಯಂತ ಪ್ರಾಯೋಜಿಕವಾಗಿ ನೀಡಲಾಗುತ್ತದೆ. ಮತ್ತು ವೈಮಾನಿಕ ಕ್ಷೇತ್ರಕ್ಕೆ ಬೇಕಾದ ಭಾಗಗಳನ್ನು ತಯಾರಿಸಲಾಗುತ್ತದೆ. ಈ ಸಂಸ್ಥೆಯ ಮೂಲ ಉದ್ದೇಶವು ನುರಿತ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಗೊಳಿಸಿ ಮತ್ತು ಕೈಗಾರಿಕೆಗಳಿಗೆ ಉತ್ಪಾದನಾ ಕ್ಷೇತ್ರದಲ್ಲಿ ಬೇಕಾದ ಸಮಾಲೋಚನೆಯನ್ನು ನೀಡುವುದಾಗಿದೆ.

ಸಂಸ್ಥೆಯು ದೀರ್ಘಾವದಿ ಹಾಗೂ ಅಲ್ಪಾವಧಿ ತರಬೇತಿಯನ್ನು ನೀಡುತ್ತದೆ. ಉಪಕರಣಗಳು ಮತ್ತು ಡೈ ತಯಾರಿಕೆಯಲ್ಲಿ ಡಿಪ್ಲೋಮೊ, ಡಿಪ್ಲೋಮೊ ಇನ್ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್, ಡಿಪ್ಲೋಮೊ ಇನ್ ಪ್ರಿಸಿಶನ್ ಮ್ಯಾನುಫ್ಯಾಕ್ಚರಿಂಗ್, ಡಿಪ್ಲೋಮೊ ಇನ್ ಮೆಕಟ್ರಾನಿಕ್ಸ್, ಪೋಸ್ಟ್ ಡಿಪ್ಲೋಮೊ ಇನ್ ಟೂಲ್ ಡಿಜೈನ್ ಎಂ.ಟೆಕ್ ಇನ್ ಟೂಲ್ ಇಂಜಿನಿಯರಿಂಗ್ ಇವುಗಳಲೆಲ್ಲಾ ದೀರ್ಘಾವಧಿ ತರಬೇತಿಗಳನ್ನು ನಡೆಸಲಾಗುತ್ತದೆ. ಅಲ್ಪಾವದಿ ತರಭೇತಿಗಳೆಂದರೆ. ಆಟೊ ಕ್ಯಾಡ್, ಸಿಎನ್‌ಸಿ, ಮಾಸ್ಟರ್ ಕ್ಯಾಮ್, ಸಿಎನ್‌ಸಿ ಮಿಲ್ಲಿಂಗ್, ಪ್ರೋಯಿ, ಮೆಷಿನಿಸ್ಟ್ ಇತ್ಯಾದಿಗಳಾಗಿರುತ್ತವೆ.

ಜಿಟಿಟಿಸಿಯು ಐ.ಎಸ್.ಆರ್.ಓ, ಎಡಿಎ .ಎಚ್.ಎ.ಎಲ್, ಎನ್.ಎ.ಎಲ್, ಐ.ಎಸ್.ಟಿ.ಆರ್.ಎ.ಸಿ, ಟೊಯೊಟಾ, ಟಿವಿಎಸ್, ಇತ್ಯಾದಿ ಕಂಪನಿಗಳಿಗೆ ಉಪಕರಣಗಳನ್ನು ಅಭಿವೃದ್ಧಿಗೊಳಿಸಿದೆ. ಜಿಟಿಟಿಸಿಯು ಬೆಂಗಳೂರು ಮತ್ತು ಮೈಸೂರಿನಲ್ಲಿ ಅತಿ ಉತ್ತಮ ಪ್ರಿಷಿಸಿನ್ ಉಪಕರಣಗಾರ ಸಲಕರಣೆಗಳನ್ನು ಒಳಗೊಂಡಿರುವ ಪ್ರಮುಖ ಕೇಂದ್ರಗಳನ್ನು ಹೊಂದಿದೆ. ಕರ್ನಾಟಕದಲ್ಲಿ ಜಿಟಿಟಿಸಿಯ 18 ಕೇಂದ್ರಗಳು ಸ್ಥಾಪನೆಗೊಂಡಿದೆ. ಪ್ರಸಕ್ತ ಸಾಲಿನಲ್ಲಿ ಜಿಟಿಟಿಸಿಗೆ ತನ್ನ ಉಪ ಕೇಂದ್ರಗಳನ್ನು ಉನ್ನತಿಕರಿಸಲಿಕ್ಕಾಗಿ ರೂ.57.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**ಇ) ವಿಜ್ಞಾನ ಮತ್ತು ತಂತ್ರಜ್ಞಾನ ಉದ್ಯಮಿಗಳ ಪಾರ್ಕ್(ಸ್ಟೆಪ್ಸ್)**

ಈ ಯೋಜನೆಯು ಯುವ ಇಂಜಿನಿಯರ್‌ಗಳು ಹಾಗೂ ತಂತ್ರಜ್ಞರುಗಳಿಗೆ ಹೊಸ ತಂತ್ರಜ್ಞಾನದ ಮಾಹಿತಿ ಹಾಗೂ ಬಂಡವಾಳ ಹೂಡುವಲ್ಲಿ ಅಗತ್ಯವಿರುವ ಕೌಶಲ್ಯಾಭಿದ್ಧಿ ತರಬೇತಿ/ಉದ್ಯಮ ಶೀಲತಾ ಅಭಿವೃದ್ಧಿ ತರಬೇತಿ ನೀಡಿ ಉತ್ಸಾಹಕರನ್ನಾಗಿ ಮಾಡಿ ಕೈಗಾರಿಕೋದ್ಯಮಿಗಳನ್ನಾಗಿ ಪ್ರೋತ್ಸಾಹಿಸುವ ಉದ್ದೇಶವನ್ನು ಹೊಂದಿದೆ. ಈ ಮೇಲ್ಕಂಡ ಸಂಸ್ಥೆಯು ಕುಶಲತೆಯ ಉನ್ನತೀಕರಣ ಹಾಗೂ ತಾಂತ್ರಿಕತೆಯ ವರ್ಗಾವಣೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇಂತಹ 14 ಸಂಸ್ಥೆಗಳು ಸ್ಥಾಪಿಸಲ್ಪಟ್ಟಿದ್ದು ಕಾರ್ಯನಿರ್ವಹಣೆ ಮಾಡುತ್ತಿವೆ. ಪ್ರಸಕ್ತ ಸಾಲಿನಲ್ಲಿ ರೂ.1.67 ಲಕ್ಷವನ್ನು ನಾಮನ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಕಾರ್ಕಳ ಹಾಗೂ ರೂ.3.00 ಲಕ್ಷಗಳನ್ನು ಬಿಇಸಿ ಇನ್ಸಿಟ್ಯೂಟ್ ಬಾಗಲಕೋಟೆ ಇವರುಗಳಿಗೆ ಬಿಡುಗಡೆ ಮಾಡಲಾಗಿದೆ.

**ಎಫ್) ಗ್ರಾಮೀಣ ಅಭಿವೃದ್ಧಿ ಮತ್ತು ಸ್ವಉದ್ಯೋಗ ತರಬೇತಿ ಕೇಂದ್ರಗಳು(ರೂಡ್‌ಸೆಟಿ):**

2001-06ನೇ ರಾಜ್ಯದ ಕೈಗಾರಿಕಾ ನೀತಿಯಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ರೂಡ್‌ಸೆಟಿ ಮಾದರಿ ಸಂಸ್ಥೆಯನ್ನು ಸ್ಥಾಪಿಸಲು ಉದ್ದೇಶಿಸಲಾಗಿರುತ್ತದೆ. ಈ ಗ್ರಾಮೀಣಾಭಿವೃದ್ಧಿ ಸ್ವಉದ್ಯೋಗ ತರಬೇತಿ ಸಂಸ್ಥೆಗಳನ್ನು ಬ್ಯಾಂಕುಗಳ ಸಹಯೋಜನೆಯೊಂದಿಗೆ ಸ್ಥಾಪಿಸಲಾಗುತ್ತಿದ್ದು ಸ್ವಉದ್ಯೋಗಿಗಳನ್ನಾಗಿಸಲು ಗ್ರಾಮೀಣ ಯುವಕ ಯುವತಿಯರಿಗೆ ಎಲ್ಲಾ ರೀತಿಯ ತರಬೇತಿ ಹಾಗೂ ಮಾರ್ಗದರ್ಶನವನ್ನು ಕೈಗಾರಿಕಾ/ಸೇವಾ ವಲಯಗಳಲ್ಲಿ ಉಚಿತವಾಗಿ ಸರ್ಕಾರದ ವಿವಿಧ ಯೋಜನೆಗಳಡಿ ಒದಗಿಸುತ್ತಾ ಬಂದಿದೆ. ಇದುವರೆಗೆ 24 ಜಿಲ್ಲೆಗಳಲ್ಲಿ 29 ರೂಡ್‌ಸೆಟಿ ಸಂಸ್ಥೆಗಳು ಸ್ಥಾಪಿತವಾಗಿದ್ದು ,ಇನ್ನೂ ಬೆಂಗಳೂರು ನಗರ, ದಾವಣಗೆರೆ, ಚಿಕ್ಕಬಳ್ಳಾಪುರ, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಸ್ಥಾಪಿತವಾಗಬೇಕಾಗಿರುತ್ತದೆ. ರೂಡಸೆಟಿ ಯೋಜನೆಯಡಿಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಯೋಜನಾ ವೆಚ್ಚದ ಶೇಕಡ 50 ರಷ್ಟು, ರೂ.20.00 ಲಕ್ಷಗಳ ಮಿತಿಗೊಳಪಟ್ಟಂತೆ ಅನುದಾನ ನೀಡಲಾಗುತ್ತಿದೆ. ಸ್ಥಾಪಿತವಾದ ಮೊದಲ 2 ರಿಂದ 3 ವರ್ಷಗಳವರೆಗೆ ಶೇಕಡ 50 ರಂತೆ ರೂ.50.00 ಲಕ್ಷಗಳ ಮಿತಿಗೊಳಪಟ್ಟು ಅವರ್ತಕ ವೆಚ್ಚವನ್ನು ಭರಿಸಲಾಗುವುದು. 2008-09ನೇ ಸಾಲಿನಲ್ಲಿ ಒದಗಿಸಿದ್ದ ರೂ.25.00 ಲಕ್ಷಗಳಲ್ಲಿ ರೂ.10.00 ಲಕ್ಷವನ್ನು ರೂಡ್‌ಸೆಟಿ ರಾಯಚೂರು ಹಾಗೂ ರೂ.15.00 ಲಕ್ಷಗಳನ್ನು ವಿಬ್‌ಸೆಟಿ(ವಿಜಯಬ್ಯಾಂಕ್) ಹಾವೇರಿಗೆ ಬಿಡುಗಡೆ ಮಾಡಲಾಗಿದೆ.

**6) ಕುಶಲ ಕರ್ಮಿ ಚಟುವಟಿಕೆಗಳು**

**ಎ) ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ**

ಈ ನಿಗಮವು ಕರಕುಶಲ ಉತ್ತೇಜನ ಕಾರ್ಯಕ್ರಮಗಳಿಗೆ ನೊಡಲ್ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಕರಕುಶಲ ವಸ್ತುಗಳ ತಯಾರಿಕೆಗೆ ಕಚ್ಚಾ ಸಾಮಾಗ್ರಿಗಳ ಸರಬರಾಜು, ಮಾರುಕಟ್ಟೆ ಉತ್ತೇಜನ ಮುಂತಾದ ಸೌಲಭ್ಯಗಳನ್ನು ಕರಕುಶಲ ಕರ್ಮಿಗಳಿಗೆ ನೀಡುತ್ತಿದೆ. ಈ ನಿಗಮವು 13 ಕರಕುಶಲ ಸಂಕೀರ್ಣಗಳನ್ನು ಹಾಗೂ 1222 ವಸತಿ ಕಾರ್ಯಗಾರಗಳನ್ನು ಹೊಂದಿದೆ. ನಿಗಮದ ಕೆಲವು ಪ್ರಮುಖ ಚಟುವಟಿಕೆಗಳು ಈ ಕೆಳಗಿನಂತಿದೆ.

1) ಕಚ್ಚಾ ಮಾಲಿನ ಮೇಲೆ ಸಹಾಯಧನ (ಬೆಳ್ಳಿ ಸತುವಿನ) ಬಿದರಿನ ಕುಶಲ ಕರ್ಮಿಗಳಿಗೆ

2) ಕರಕುಶಲ ವಸ್ತುಗಳ ಮಾರಾಟದ ಮೇಲೆ ರಿಯಾಯಿತಿ
3) ಸ್ಥಳೀಯ ರಫ್ತು ಉತ್ತೇಜನ ಮತ್ತು ವಸ್ತು ಪ್ರದರ್ಶನ
4) ಅಖಿಲ ಭಾರತ ಕರಕುಶಲ ವಸ್ತುಗಳ ಸಾಪ್ತಾಹಿಕ ಆಚರಣೆ (ರಾಜ್ಯ ಪ್ರಶಸ್ತಿ)
5) ಕರಕುಶಲ ಕರ್ಮಿಗಳಿಗೆ ರಿಯಾಯಿತಿ ದರಗಳಲ್ಲಿ ಶ್ರೀಗಂಧದ ಮರಗಳ ಸರಬರಾಜು
6) ರಾಜ್ಯ ಮಟ್ಟದ ವಸ್ತು ಪ್ರದರ್ಶನ
7) ಮೂಲಭೂತ ಕಸುಬು ಸಂಕೀರ್ಣಗಳು

ಪ್ರಸಕ್ತ ಸಾಲಿನಲ್ಲಿ, ರೂ.30.00 ಲಕ್ಷಗಳನ್ನು ನಿಗಮದ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ನೀಡಲಾಗಿದೆ. 2008-09ನೇ ಸಾಲಿನಲ್ಲಿ ನಿಗಮದ ಒಟ್ಟು ವಹಿವಾಟು ರೂ.3580.00 ಲಕ್ಷಗಳಾಗಿರುತ್ತದೆ.

**ಬಿ) ಅರ್ಬನ್ ಹಾತ್ :**

ಅರ್ಬನ್ ಹಾತ್ ಎಂಬ ಒಂದು ಯೋಜನೆಯನ್ನು ಕೇಂದ್ರ ಸರ್ಕಾರವು ರೂಪಿಸಿದೆ. ಈ ಹಾತ್‌ಗಳನ್ನು ರಾಜ್ಯದ ಮುಖ್ಯ ಸ್ಥಳಗಳಲ್ಲಿ ನೆಲೆಗೊಳಿಸಿ ಕುಶಲ ಕರ್ಮಿಗಳು ಅವರ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ಅನುವಾಗುವಂತೆ ಯೋಜನೆಯು ವಿಕಾಸಗೊಂಡಿದೆ. ಕುಶಲಕರ್ಮಿಗಳ ಸಂಕೀರ್ಣದಲ್ಲಿ ಮತ್ತು ವಸ್ತು ಪ್ರದರ್ಶನ ಭವನದಲ್ಲಿ 40 ರಿಂದ 50 ಮಳಿಗೆಗಳು ಇರುವಂತೆ ಯೋಜಿಸಿ ಕುಶಲ ಕರ್ಮಿಗಳ ಅವಶ್ಯಕತೆಗೆ ಅನುಗುಣವಾಗಿ ವಾರದ ವಸ್ತು ಪ್ರದರ್ಶನ ವ್ಯವಸ್ಥೆಯಲ್ಲಿ ಅವರ ಉತ್ಪನ್ನಗಳನ್ನು ಮಾರಾಟ ಮಾಡಬಹುದು. ಈ ಯೋಜನೆಗೆ ಕೇಂದ್ರ ಸರ್ಕಾರದ ಜವಳಿ ಸಚಿವಾಲಯವು ಗರಿಷ್ಠ ರೂ.140.00 ಲಕ್ಷಗಳು ಅಥವಾ ಶೇಕಡ 70 ರಷ್ಟು ಯೋಜನಾ ವೆಚ್ಚವನ್ನು ನೀಡುತ್ತದೆ. ಉಳಿದ ಶೇ.30 ಯೋಜನಾವೆಚ್ಚ ಅಥವಾ ಗರಿಷ್ಠ ರೂ.60.00 ಲಕ್ಷದಷ್ಟನ್ನು ರಾಜ್ಯ ಸರ್ಕಾರ ಮತ್ತು ಕಾರ್ಯಕಾರಿ ಸಂಸ್ಥೆಗಳು ಭರಿಸುತ್ತದೆ. ಒಟ್ಟು ರೂ.10.00 ಲಕ್ಷವನ್ನು ಮೊದಲನೆ ವರ್ಷಕ್ಕೆ ರೂ.5.00 ಲಕ್ಷಗಳನ್ನು 2ನೇ ವರ್ಷಕ್ಕೆ ಕೇಂದ್ರ ಸರ್ಕಾರವು ಯೋಜನೆಯ ಪ್ರಚಾರಕ್ಕಾಗಿ ನೀಡಿದೆ. ಈ ಯೋಜನೆಯ ಎಲ್ಲಾ ನಿಯಂತ್ರಣವನ್ನು ಆಡಳಿತ ಮಂಡಳಿಯು ಹೊಂದಿರುತ್ತದೆ.

2008-09ನೇ ಸಾಲಿನಲ್ಲಿ ರೂ.90.00 ಲಕ್ಷಗಳನ್ನು ಪಿಳಿಕುಲ ನಿಸರ್ಗಧಾಮ ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರ್ಬನ್‌ಹಾಥ್‌ನ್ನು ಸ್ಥಾಪಿಸಲು ನೀಡಲಾಗಿದೆ.

**ಸಿ) ಖಾದಿ ಗ್ರಾಮೋದ್ಯೋಗ ಮಂಡಳಿ:**

ಖಾದಿ ಬೋರ್ಡ್‌ನ ಮುಖ್ಯ ಉದ್ದೇಶವು ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಪಡಿಸಿ ಖಾದಿ ವಲಯಗಳನ್ನು ನಿಯಂತ್ರಿಸಿ ಗುಡಿ ಕೈಗಾರಿಕೆಗಳಿಗೆ ಸಹಾಯವನ್ನು ಒದಗಿಸುವುದರ ಮುಖಾಂತರ ಗ್ರಾಮೀಣ ಪ್ರದೇಶದಲ್ಲಿರುವ ಕುಶಲ ಕರ್ಮಿಗಳಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದಲ್ಲದೆ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದಾಗಿರುತ್ತದೆ.

**ಸಂಸ್ಥೆಯ ಮುಖ್ಯ ಚಟುವಟಿಕೆಗಳು ಈ ಕೆಳಗಿನಂತಿವೆ:**

1) ಗ್ರಾಮೀಣ ಉದ್ಯೋಗ ಸೃಷ್ಟಿಸುವ ಕಾರ್ಯಕ್ರಮ (ಬೀಜಧನ ಯೋಜನೆ)

2) ಬಡ್ಡಿ ಸಹಾಯಧನ ಯೋಜನೆ
3) ಉತ್ಪನ್ನ ಅಭಿವೃದ್ಧಿ ವಿನ್ಯಾಸ ಹಾಗೂ ಪ್ಯಾಕೇಜಿಂಗ್
4) ಖಾದಿ ಅಭಿವೃದ್ಧಿ (ರಿಯಾಯಿತಿ ಮತ್ತು ಪ್ರೋತ್ಸಾಹ)
5) ಕೈಗಾರಿಕಾ ವಿಕಾಸ
6) ಖಾದಿ ಉತ್ಪನ್ನಗಳ ಚಿಲ್ಲರೆ ಮಾರಾಟದ ಮೇಲೆ ರಿಯಾಯಿತಿ
7) ಜೇನುಕೃಷಿ

**ಖಾದಿ ಉತ್ಪನ್ನಗಳ ಚಿಲ್ಲರೆ ಮಾರಾಟದ ಮೇಲೆ ರಿಯಾಯಿತಿ:** ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಖಾದಿ ಬಟ್ಟೆಗಳ ಚಿಲ್ಲರೆ ಮಾರಾಟದ ಮೇಲೆ ರಿಯಾಯಿತಿಯನ್ನು ನೀಡುತ್ತಾ ಬಂದಿದೆ. ಹೀಗೆ ರಿಯಾಯಿತಿಯನ್ನು ನೀಡುವುದರ ಮೂಲಕ ಖಾದಿಯ ಉತ್ಪಾದನೆ ಮಾರಾಟ ಹಾಗೂ ಈ ರಂಗದಲ್ಲಿ ಉದ್ಯೋಗ ಸೃಷ್ಟಿಗೆ ಒತ್ತಾಸೆ ನೀಡುತ್ತಿದೆ. ವರ್ಷವಿಡಿ ಮಾರಾಟವಾಗುವ ಖಾದಿ ಉತ್ಪನ್ನದ ಮೇಲೆ ರಾಜ್ಯ ಸರ್ಕಾರವು ಶೇಕಡ 5 ರಂತೆ ಹಾಗೂ ಕೇಂದ್ರ ಸರ್ಕಾರವು ಶೇಕಡ 10 ರಂತೆ ರಿಯಾಯಿತಿಯನ್ನು ನೀಡುವುದಲ್ಲದೆ, ನೂರೆಂಟು ದಿನಗಳ ವಿಶೇಷ ರಿಯಾಯಿತಿ–ರಾಜ್ಯ ಹಾಗು ಕೇಂದ್ರ ಸರ್ಕಾರಗಳು ಕ್ರಮವಾಗಿ ಶೇಕಡ 10 ರಂತೆ ರಿಯಾಯತಿ ನೀಡಲಾಗುವುದು. ಈ ಕಾರ್ಯಕ್ರಮದಡಿಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ರಾಜ್ಯ ಸರ್ಕಾರವು 300 ಲಕ್ಷಗಳನ್ನು ನೀಡಿದೆ.

ಪ್ರಸಕ್ತ ಸಾಲಿನ ಖಾದಿ ವಲಯ ನಿರ್ವಹಣೆಯ ಪ್ರಗತಿ ಈ ಕೆಳಗಿನಂತಿದೆ

**ರೂ.ಲಕ್ಷಗಳಲ್ಲಿ**

| ಕ್ರ.ಸ | ಕೈಗಾರಿಕೆ | ಉತ್ಪಾದನೆ | ಚಿಲ್ಲರೆ ವ್ಯಾಪಾರ | ಸಗಟು ವ್ಯಾಪಾರ | ಉದ್ಯೋಗ (ಸಂಖ್ಯೆಗಳಲ್ಲಿ) | ಗಳಿಕೆ |
|---|---|---|---|---|---|---|
| 1 | ಅರಳೆ ಖಾದಿ | 513.30 | 566.00 | 253.35 | 5341 | 195.60 |
| 2 | ರೇಷ್ಮೆ ಖಾದಿ | 426.25 | 311.25 | 159.05 | 729 | 167.90 |
| 3 | ಉಣ್ಣೆ | 324.90 | 263.20 | 46.25 | 6650 | 133.15 |
| 4 | ಪಾಲಿವಸ್ತ್ರ | 108.50 | 143.60 | 42.35 | 662 | 42.75 |
| | ಒಟ್ಟು | 1372.95 | 1284.05 | 501.00 | 13382 | 539.40 |

2008–09ನೇ ಸಾಲಿನಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು 13 ಜಿಲ್ಲಾಮಟ್ಟ ವಸ್ತು ಪ್ರದರ್ಶನಗಳನ್ನು ಧಾರವಾಡ, ಬಾಗಲಕೋಟೆ, ತುಮಕೂರು, ಬೆಂಗಳೂರು ನಗರ, ಕೊಡಗು, ಗುಲ್ಬರ್ಗಾ, ರಾಮನಗರ, ಬೀದರ್, ಚಿತ್ರದುರ್ಗ, ದಾವಣಗೆರೆ, ಹಾಸನ, ಉಡುಪಿ, ಮಂಗಳೂರುಗಳಲ್ಲಿ ವ್ಯವಸ್ಥೆಗೊಳಿಸಿದೆ. ಒಂದು ರಾಜ್ಯಮಟ್ಟದ ವಸ್ತು ಪ್ರದರ್ಶನವು ಕೊಪ್ಪಳ ಜಿಲ್ಲೆಯಲ್ಲಿ ನಡೆಸಿದೆ. ಇದಲ್ಲದೆ ರಾಜ್ಯದ 28 ಜಿಲ್ಲೆಗಳಲ್ಲಿ 1 ದಿನದ 54 ಅರಿವುಮೂಡಿಸುವ ಕಾರ್ಯಕ್ರಮಗಳನ್ನು ಸಹ ಅತ್ಯಂತ ಯಶಸ್ವಿಯಾಗಿ ನಡೆಸಲಾಗಿದೆ.

**ಡಿ) ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ :**

ಈ ನಿಗಮವು ರಾಜ್ಯದಲ್ಲಿ ನಾರಿನ ವಲಯವನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಿದೆ. ನಿಗಮದ ಕಾರ್ಯಚಟುವಟಿಕೆಗಳು ಈ ಕೆಳಗಿನಂತಿವೆ.

1) ರಾಜ್ಯದಲ್ಲಿ ನಾರಿನ ಕೈಗಾರಿಕಾ ಆಬಿವೃದ್ಧಿ.
2) ತೆಂಗಿನ ನಾರಿನ ಉತ್ಪನ್ನಗಳ ಹಾಗೂ ತೆಂಗಿನ ನಾರಿನ ಉತ್ಪದನಾ ಮಾರಾಟಕ್ಕೆ ಉತ್ತೇಜನ
3) ನಾರು ವಲಯದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳ ಅನುಷ್ಠಾನ.
4) ಗ್ರಾಮೀಣ ಮಹಿಳೆಯರಿಗೆ(ಪ.ಜಾ/ಪ.ಪಂ ದವರು ಒಲಗೊಂಡಂತೆ) ತೆಂಗಿನ ನಾರಿನ ಉತ್ಪನ್ನಗಳಲ್ಲಿ ತರಬೇತಿ ಹಾಗೂ ತರಬೇತಿಯ ನಂತರ ಅವರನ್ನು ಉತ್ಪಾದನೆಯಲ್ಲಿ ಉದ್ಯೋಗ ನಿರತರಾಗಿ ಮಾಡುವುದು.
5) ತೆಂಗಿನ ನಾರಿನ ಉತ್ಪನ್ನಗಳ ಸಂಶೋಧನೆ ಹಾಗೂ ಅಭಿವೃದ್ಧಿ

2008-09ನೇ ಸಾಲಿನ ನಿಗಮದ ಸಾಧನೆಯು ಈ ಕೆಳಗಿನಂತಿದೆ.

**ರೂ. ಲಕ್ಷಗಳಲ್ಲಿ**

| ಕ್ರ.ಸ | ವಿಷಯ | 2008-09 | |
|---|---|---|---|
| | | ಗುರಿ | ಸಾಧನೆ |
| 1 | ಉತ್ಪಾದನೆ | 500 | 271.82 |
| 2 | ಮಾರಾಟ | 560 | 351.60 |
| 3 | ಉದ್ಯೋಗ | | 550 |

**ಇ) ಕರ್ನಾಟಕ ರಾಜ್ಯ ನಾರು ಸಹಕಾರ ಫೆಡರೇಷನ್ ನಿಯಮಿತ :**

ಸಹಕಾರ ಸಂಘಗಳ ಮುಖಾಂತರ ನಾರು ವಲಯವನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಮೇಲ್ಕಂಡ ಸಂಸ್ಥೆಯು 1961ರಲ್ಲಿ ಸ್ಥಾಪಿತವಾಯಿತು. ಇದರ ಮುಖ್ಯ ಉದ್ದೇಶವು ಪ್ರಾಥಮಿಕ ಸಹಕಾರ ಸಂಘಗಳಿಗೆ ಬೆಂಬಲ, ಸಹಾಯ ನೀಡುವುದು, ತರಬೇತಿ ಒದಗಿಸುವುದು, ನಾರು ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವುದು ತಾಂತ್ರಿಕ ಮಾರ್ಗದರ್ಶನ ನೀಡಿ ಸರ್ಕಾರದ ಐಸಿಡಿಪಿ ಯೋಜನೆಯನ್ನು ಅನುಷ್ಠಾನಗೊಳಿಸುವುದಾಗಿರುತ್ತದೆ. ಈ ಸಂಸ್ಥೆಯು 17 ಮಾರುಕಟ್ಟೆ ಔಟ್‌ಲೇಟ್‌ಗಳನ್ನು ಹಾಗೂ 20 ಉತ್ಪಾದನಾ ಘಟಕಗಳನ್ನು ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಹೊಂದಿದೆ. ಈ ಫೆಡರೇಷನ್ 1200 ಗ್ರಾಮೀಣ ಜನರಿಗೆ ಉದ್ಯೋಗವನ್ನು ಒದಗಿಸಿದೆ ಅದರಲ್ಲಿ ಶೇಕಡ 90 ರಷ್ಟು ಮಹಿಳೆಯರಾಗಿದ್ದಾರೆ. ಈ ಫೆಡರೇಷನ್‌ಗೆ 52 ನಾರು ಪ್ರಾಥಮಿಕ ಸಹಕಾರ ಸಂಘಗಳು ಸೇರಿಕೊಂಡಿವೆ. ಈ ಸಂಸ್ಥೆಯು ಕಾಯರ್ ಫೈಬರ್, ನಾರು ಚಾಪೆ, ಜಿಯೋ ಟೆಕ್ಸ್‌ಟೈಲ್ಸ್ ಮುಂತಾದ ಉತ್ಪನ್ನಗಳನ್ನು ಉತ್ಪಾದಿಸುತ್ತದೆ.

2008-09ನೇ ಸಾಲಿನಲ್ಲಿ ಫೆಡರೇಷನ್ ಮೇಲಿನ ಸಂಸ್ಥೆಯು ರೂ.125.07 ಲಕ್ಷದಷ್ಟು ನಾರು ಉತ್ಪನ್ನಗಳನ್ನು ಉತ್ಪಾದಿಸಿದೆ. ಹಾಗೂ ರೂ.256.96 ಲಕ್ಷದಷ್ಟು ವ್ಯಾಪಾರ ವಹಿವಾಟನ್ನು ಮಾಡಿದೆ. 1200 ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿದೆ.

**ಎಫ್) ಕರ್ನಾಟಕ ಚರ್ಮ ಕೈಗಾರಿಕಾ ಆಬಿವೃದ್ಧಿ ನಿಗಮ ನಿಯಮಿತ:**

ಕರ್ನಾಟಕ ಚರ್ಮ ಕೈಗಾರಿಕಾ ಆಬಿವೃದ್ಧಿ ನಿಗಮವು 1976ರಲ್ಲಿ ಸ್ಥಾಪಿಸಲ್ಪಟ್ಟಿತ್ತು. ಈ ನಿಗಮವು ಚರ್ಮ ಕೈಗಾರಿಕೆಯ ಸಮಗ್ರ ಅಭಿವೃದ್ಧಿಯೊಂದಿಗೆ ಪರಿಶಿಷ್ಟ ಜಾತಿಯ ಚರ್ಮ ಕುಶಲ ಕರ್ಮಿಗಳ ಸಾಮಾಜಿಕ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಉದ್ದೇಶದಿಂದ ಸ್ಥಾಪಿತಗೊಂಡಿದೆ. ಆಗಿನಿಂದ ಇಲ್ಲಿಯವರೆಗೂ ನಿಗಮವು ಅನೇಕ ಅಭಿವೃದ್ಧಿ ಹಾಗೂ ವಾಣಿಜ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ನಿಗಮವು ಪರಿಶಿಷ್ಟ ಜಾತಿಯ ಚರ್ಮ ಕುಶಲ ಕರ್ಮಿಗಳ ಸಾಮಾಜಿಕ ಆರ್ಥಿಕ ಸುಧಾರಣೆಗಾಗಿ ಅನೇಕ ಕಾರ್ಯಕ್ರಮಗಳನ್ನು ಅಭಿವೃದ್ಧಿ ಚಟುವಟಿಕೆಯಾಗಿ ಹಮ್ಮಿಕೊಂಡಿದೆ. ಈ ನಿಗಮವು 25 ಸಾವಿರಕ್ಕೂ ಹೆಚ್ಚಿನ ಚರ್ಮ ಕುಶಲ ಕರ್ಮಿಗಳಿಗೆ ವಸತಿ ಕಾರ್ಯಗಾರಗಳನ್ನು ಹಾಗೂ ಸಾಮಾನ್ಯ ಸೌಲಭ್ಯ ಕೇಂದ್ರಗಳನ್ನು ನಿರ್ಮಿಸುವುದರೊಂದಿಗೆ ತರಬೇತಿ ಕಾರ್ಯಕ್ರಮಗಳನ್ನು ಹಾಗೂ ವೇ ಸೈಡ್ ಕ್ಯಾಬಿನ್‌ಗಳ ವಿತರಣೆಯನ್ನು ಕೂಡ ಮಾಡಿದೆ.

ನಿಗಮವು ಕುಶಲ ಕರ್ಮಿಗಳು ಹಾಗೂ ಸಣ್ಣ ಕೈಗಾರಿಕಾ ಘಟಕಗಳು ಉತ್ಪಾದಿಸಿದ ವಸ್ತುಗಳಿಗೆ ತನ್ನ ವಾಣಿಜ್ಯ ಚಟುವಟಿಕೆಯಡಿಯಲ್ಲಿ ಮಾರುಕಟ್ಟೆ ಸಹಾಯವನ್ನು ಒದಗಿಸುತ್ತದೆ.

ಇಲ್ಲಿಯವರೆಗೆ ನಿಗಮವು 1200 ಕುಶಲ ಕರ್ಮಿಗಳಿಗೆ ಹಾಗೂ 100 ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿಗೆ ಮಾರುಕಟ್ಟೆ ಸಹಾಯವನ್ನು ನೀಡಿದೆ.

**7) ಬಂಡವಾಳ ಮತ್ತು ವ್ಯಾಪಾರ ಉತ್ತೇಜನ ಚಟುವಟಿಕೆಗಳು**

**ಎ) ಕರ್ನಾಟಕ ಉದ್ಯೋಗ ಮಿತ್ರ:**

ಕರ್ನಾಟಕ ಉದ್ಯೋಗ ಮಿತ್ರವು ಕೈಗಾರಿಕಾ ಉದ್ಯಮಿಗಳಿಗೆ ಕೈಗಾರಿಕಾ ಘಟಕಗಳ ಸ್ಥಾಪನೆಗೆ ಅನುವಾಗುವಂತೆ ಬೆಂಗಾವಲು ಸೇವೆಯನ್ನು ನೀಡುವ ಉದ್ದೇಶವನ್ನು ಹೊಂದಿದೆ. ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿಯ ಸಚಿವಾಲಯದಂತೆ ಕೂಡ ಈ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ. ಕರ್ನಾಟಕ ಉದ್ಯೋಗ ಮಿತ್ರವು ದೇಶಿ ಹಾಗೂ ವಿದೇಶಿ ಬಂಡವಾಳದಾರರನ್ನು ಕರ್ನಾಟಕದಲ್ಲಿ ಕೈಗಾರಿಕಾ ಬಂಡವಾಳ ಹೂಡಿ ಘಟಕಗಳನ್ನು ಸ್ಥಾಪಿಸುವಂತೆ ಮಾಡಲು ಕೈಗಾರಿಕಾ ಪ್ರಚಾರ ಮತ್ತು ಪ್ರಕಟಣೆಗಳ ಅನೇಕ ಚಟುವಟಿಕೆಗಳನ್ನು ವ್ಯವಸ್ಥೆಗೊಳಿಸುತ್ತದೆ. ಉದಾಹರಣೆಗೆ ಬಂಡವಾಳ ಹೂಡಿಕೆದಾರರ ಸಭೆ, ರಸ್ತೆ ಪ್ರದರ್ಶನ ,ವ್ಯಾಪಾರ ಪ್ರತ್ಯಾಯೋಜನೆ ಇತ್ಯಾದಿಗಳು.

2008–09ನೇ ಸಾಲಿನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಮುಖಂಡತ್ವದಲ್ಲಿ ಒಂದು ಪ್ರಾತಿನಿಧ್ಯವು ಯುಎಸ್ಎ, ಯುಕೆ ಗಳಿಗೆ ಭೇಟಿ ನೀಡಿ ಯುಕೆಯ ಮ್ಯಾನ್‌ಚೇಸ್ಟರ್, ವಾಷಿಂಗ್‌ಟನ್, ನ್ಯೂಯಾರ್ಕ್, ಚಿಕಾಗೋ, ಅಟ್ಲಾಂಟ ಮತ್ತು ಸ್ಯಾನ್ ಫ್ರಾನ್‌ಸಿಸ್ಕೋ ಗಳಲ್ಲಿ ವ್ಯಾಪಾರ ಸಭೆಯನ್ನು ಏರ್ಪಡಿಸಿದೆ.

ಅದೇ ರೀತಿಯಲ್ಲಿ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಪ್ರಾತಿನಿಧ್ಯವು ಚೈನಾ, ಜಪಾನ್ ಮತ್ತು ಕೊರಿಯಾಗೆ ಭೇಟಿ ನೀಡಿದೆ. ಸಿಯಾಲ್ (ಕೊರಿಯಾ) ಮತ್ತು ಸಾಂಗೈ (ಚೈನಾ) ಗಳಲ್ಲಿ ವ್ಯಾಪಾರ ಸಭೆಗಳನ್ನು ನಡೆಸಿವೆ.

ಮಾನ್ಯ ಮುಖ್ಯ ಮಂತ್ರಿಗಳೊಡನೆ ಪ್ರತಿನಿಧಿಗಳು ಬೆಹರಿನ್ ಭೇಟಿ ಮಾಡಿ ವಿದೇಶಿ ಬಂಡವಾಳವನ್ನು ಆಕರ್ಷಿಸಲು ವ್ಯಾಪಾರ ಸಭೆಯನ್ನು ಏರ್ಪಡಿಸಲಾಯಿತು.

**ಪ್ರವಾಸಿ ಭಾರತೀಯ ದಿವಸ:** ಕರ್ನಾಟಕ ಉದ್ಯೋಗ ಮಿತ್ರವು ಚೆನ್ನೈನಲ್ಲಿ ಜನವರಿ 2009ರಲ್ಲಿ ನಡೆದ ಪ್ರವಾಸಿ ಭಾರತೀಯ ದಿವಸದಲ್ಲಿ ಭಾಗವಹಿಸಿದೆ.

**"ಕರ್ನಾಟಕ ಅನಿವಾಸಿ ಕೋಶ"** – ಈ ಕೋಶವು ಕರ್ನಾಟಕ ಮೂಲದ ಅನಿವಾಸಿ ಕನ್ನಡಿಗರಿಗೆ ಕರ್ನಾಟಕದಲ್ಲಿ ಬಂಡವಾಳ ಹೂಡಿಕೆಯ ಮಾಹಿತಿಯನ್ನು ನೀಡಿ ಅನಿವಾಸಿ ಕನ್ನಡಿಗರು ಕರ್ನಾಟಕದಲ್ಲಿ ಕೈಗಾರಿಕಾ ಬಂಡವಾಳ ಹೂಡಿಕೆ ಮಾಡುವಂತೆ ಉತ್ತೇಜಿಸುವ ಕೋಶವಾಗಿ ಸ್ಥಾಪಿತವಾಗಿವೆ.

**ಬಿ) ಮೆ: ವಿಶ್ವೇಶ್ವರಯ್ಯ ಕೈಗಾರಿಕಾ ವ್ಯಾಪಾರ ಕೇಂದ್ರ:**

ಮೆ: ವಿಶ್ವೇಶ್ವರಯ್ಯ ಕೈಗಾರಿಕಾ ವ್ಯಾಪಾರ ಕೇಂದ್ರ, ಬೆಂಗಳೂರು ಇದು 1965ರಲ್ಲಿ ಸ್ಥಾಪಿತವಾಗಿದೆ. ಈ ಸಂಸ್ಥೆಯು ಕರ್ನಾಟಕ ಸರ್ಕಾರದ ರಫ್ತು ಉತ್ತೇಜನ ನೋಡಲ್ ಏಜೆನ್ಸಿಯಾಗಿದ್ದು ರಫ್ತು ಉತ್ತೇಜನ ಕಾರ್ಯಕ್ರಮಗಳನ್ನು ರಾಜ್ಯದಲ್ಲಿ ಮೊದಲಿನಿಂದಲೂ ಕ್ರಿಯಾ ಶೀಲವಾಗಿ ನಡೆಸಿಕೊಂಡು ಬರುತ್ತಿದೆ. ರಾಜ್ಯ ಸರ್ಕಾರದ ಸಂಸ್ಥೆಯಾದ ಮೆ: ವಿಶ್ವೇಶ್ವರಯ್ಯ ಕೈಗಾರಿಕಾ ವ್ಯಾಪಾರ ಕೇಂದ್ರ ರಫ್ತು ಅಭಿವೃದ್ಧಿ ಹಾಗೂ ಉತ್ತೇಜನ ಕಾರ್ಯಕ್ರಮ ಕೈಗೊಳ್ಳುವ ಸಂಸ್ಥೆಯಾಗಿದೆ. ಈ ಕೇಂದ್ರವು ರಫ್ತು ಉತ್ತೇಜನ/ತರಬೇತಿ ಮ್ಯಾನೇಜ್‌ಮೆಂಟ್ ಪ್ರೋಗ್ರಾಮ್, ರಫ್ತು ತಿಳುವಳಿಕೆ ವರ್ಕ್‌ಶಾಪ್ ಮತ್ತು ಸಮ್ಮೇಳನಗಳನ್ನು ನಡೆಸುತ್ತಿವೆ.

ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ ಹಾಗೂ ವಿದೇಶಗಳಲ್ಲಿ ಜರುಗುವ ವಸ್ತು ಪ್ರದರ್ಶನಗಳಲ್ಲಿ ಹಾಗೂ ವ್ಯಾಪಾರ ಪ್ರದರ್ಶನ ಚಟುವಟಿಕೆಗಳಲ್ಲಿ ಸಂಸ್ಥೆಯು ಪಾಲ್ಗೊಳ್ಳುತ್ತಿದೆ. ಪ್ರಸಕ್ತ ಸಾಲಿನಲ್ಲಿ ವಿಐಟಿಸಿಯು ಹಲವಾರು ವಿಚಾರ ಸಂಕೀರ್ಣಗಳನ್ನು ಏರ್ಪಡಿಸಿದೆ. ಈ ಸಂಸ್ಥೆಯು ರಾಜ್ಯ ಮತ್ತು ಹೊರ ರಾಜ್ಯಗಳಲ್ಲದೆ ವಿದೇಶಗಳಲ್ಲೂ ಕೂಡ ವಸ್ತು ಪ್ರದರ್ಶನ, ವಾಣಿಜ್ಯ ಪ್ರದರ್ಶನ ಮುಂತಾದ ವ್ಯಾಪಾರ ಉತ್ತೇಜನ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೂಲಕ ವ್ಯಾಪಾರ ಉತ್ತೇಜನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

2008–09ನೇ ಸಾಲಿನಲ್ಲಿ ವಿಐಟಿಸಿಯು ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

- ರಫ್ತು ಪ್ರೇರಣಾ ಶಿಬಿರವನ್ನು ಬೀದರ್, ಸಾಗರ ಹಾಗೂ ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದು 165 ಜನರು ಭಾಗವಹಿಸಿರುತ್ತಾರೆ.

- ಜಿಲ್ಲಾ ಕೈಗಾರಿಕಾ ಕೇಂದ್ರ, ಚೆಂಬರ್ ಆಫ್ ಕಾಮರ್ಸ್ ಹಾಗೂ ಕೈಗಾರಿಕಾ ಸಂಘಗಳ ಸಹಯೋಗದೊಂದಿಗೆ ದಾವಣಗೆರೆ ಮತ್ತು ಧಾರವಾಡದಲ್ಲಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು – 150 ಆಭ್ಯರ್ಥಿಗಳು ಭಾಗವಹಿಸಿದ್ದರು.
- ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮ. ವಿಐಟಿಸಿಯು ಒಂದು ವಾರ ಕಾಲದ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮವನ್ನು ವರ್ಷಕ್ಕೆ ಮೂರು ಭಾರಿ ಬೆಂಗಳೂರಿನಲ್ಲಿ ಏರ್ಪಡಿಸುತ್ತದೆ. ಪ್ರಸಕ್ತ ಸಾಲಿನಲ್ಲಿ 82 ಜನರು ಭಾಗವಹಿಸಿರುತ್ತಾರೆ.
- ಸೆಮಿನಾರ್/ವರ್ಕ್‌ಶಾಪ್/ಮೀಟ್ಸ್ : ಹಾಲಿ ರಫ್ತುದಾರರಿಗೆ ರಫ್ತಿಗೆ ಸಂಬಂಧಿಸಿದ ಪ್ರಚಲಿತ ವಿಷಯಗಳಲ್ಲಿ ರಫ್ತು ಪರಿಣಿತರಿಂದ ಮಾಹಿತಿ ನೀಡುವುದು – 4 ವರ್ಕ್‌ಶಾಪ್ ನಡೆಸಲಾಗಿದ್ದು 190 ಆಭ್ಯರ್ಥಿಗಳು ಭಾಗವಹಿಸಿರುತ್ತಾರೆ
